ಕರ್ನಾಟಕ ವಿಧಾನ ಸಭೆ

ಮಂಗಳವಾರ 17ನೇ ಜುಲೈ 1990 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.5 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- (ಶ್ರೀ ಎಸ್.ಎಂ. ಕೃಷ್ಣ ಅವರು ಪೀಠವನ್ನು ಅಲಂಕರಿಸಿದ್ದರು)

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ರೈತರ ಸಾಲ ಮನ್ನಾ ಮಾಡುವುದು

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಪ್ರಮುಖವಾದ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಈ ರಾಜ್ಯದ ರೈತರ ಪರವಾಗಿ ತಮಗೆ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು:- ಒಂದು ನಿಮಿಷ ತಮ್ಮನ್ನು ಕರೆಯುತ್ತೇನೆ. ಶ್ರೀ ಹರ್ಷ ಕುಮಾರ್ ಗೌಡರೆ, ಈ ದಿವಸ ನಿಮ್ಮ ಹುಟ್ಟಿದ ದಿನ I wish you many returns of the day.

ಶ್ರೀ ಹರ್ಷಕುಮಾರ್ ಗೌಡ:- ವಂದನೆಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಅತ್ಯಂತ ಪ್ರಮುಖವಾದ ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂಬ ಇಚ್ಛೆಯಿಂದ ನಿನ್ನೆ ದಿವಸ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆ. ಬೇರೆ ಕಾರಣದಿಂದ ನಿನ್ನೆ ದಿವಸ ಅದರ ಬಗ್ಗೆ ಚರ್ಚೆ ಮಾಡುವುದಕ್ಕಾಗಲಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ಬೇರೆ ಎಲ್ಲ ಕಾರ್ಯಕಲಾಪಗಳನ್ನು ಬದಿಗೊತ್ತಿ ಅತ್ಯಂತ ಪ್ರಮುಖವಾದ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅಥವಾ ಚರ್ಚೆ ಮಾಡುವದಕ್ಕಿಂತ ಮುಂಚಿತವಾಗಿ ಇದರ ಮಹತ್ವವನ್ನು ತಮ್ಮ ಮನಸ್ಸಿಗೆ ಅರಿವು ಮೂಡಿಸುವ ದೃಷ್ಟಿಯಿಂದ ಇದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು ಅತ್ಯಂತ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ, ಇದಕ್ಕೆ ಹೆಚ್ಚು ಸಮಯದ ಅಗತ್ಯ ಇಲ್ಲ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತಹದ್ದು ರಾಜ್ಯ ಸರ್ಕಾರಕ್ಕೆ ಬಿಟ್ಟದ್ದು. ಇವತ್ತು ರೈತರ 10 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುವುದಕ್ಕಾಗಿ ತಂದಿರುವ ಕೇಂದ್ರ ಸರ್ಕಾರದ ಯೋಚನೆಯನ್ನು ನಾವು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ ಎಂಬುದಾಗಿ ಹೇಳಿದ್ದಾರೆ. ಈ ರೀತಿಯಾಗಿ ಒಪ್ಪಿಕೊಂಡ ಮೇಲೂ 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡಿದರೆ ಯಾರಿಗೆ ಇದು ಅನ್ವಯವಾಗುತ್ತದೆಂಬುದರ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ಇದುವರೆವಿಗೂ ಘೋಷಣೆ ಮಾಡಿಲ್ಲ. ಇವತ್ತು ತಮಗೂ ಗೊತ್ತಿದ್ದ ಹಾಗೆ, ರೈತರು ಕೃಷಿ ಕಾರ್ಯ ಮಾಡುತ್ತಿದ್ದಾರೆ. ಆ ರೈತರಿಗೆ ಬಿತ್ತನೆ ಬೀಜಕ್ಕೂ ದುಡ್ಡು ಇಲ್ಲದೆ ಸಾಹುಕಾರನ ಮನೆಗೆ ಹೋಗಿ ಸಾಲ ತೆಗೆದುಕೊಂಡು ಬಂದು ಬಿತ್ತನೆ ಮಾಡಿದ್ದಾರೆ. ಗೊಬ್ಬರಕ್ಕೂ ದುಡ್ಡು ಇಲ್ಲದೆ, ನಾಳೆ ಕಳೆ ಕೀಳುವುದಕ್ಕೂ ದುಡ್ಡು ಇಲ್ಲದೆ ಪರಿತಪಿಸುವ ಈ ಸಂದರ್ಭದಲ್ಲಿ ಫಲಾನುಭವಿಗಳು ಯಾರೆಂದು ಹೇಳದೆ, ಎಲ್ಲರಿಂದಲೂ ಬಲಾತ್ಕಾರದಿಂದ ಸಾಲ ವಸೂಲಿ ಆಗುತ್ತಿದೆ. ಇದರ ಬಗ್ಗೆ ಸಾವಿರಾರು ಅರ್ಜಿಗಳು ನಮಗೆ ಬಂದಿದೆ. ಇವತ್ತು ರಾಜ್ಯದಲ್ಲಿ ಅಶಾಂತಿ ವಾತಾವರಣ ಉಂಟಾಗಬಾರದು ಎನ್ನುವ ದೃಷ್ಟಿಯಿಂದ ಏನು ಇವತ್ತು ಬಲಾತ್ಕಾರದಿಂದ ಸಾಲ ವಸೂಲು ಮಾಡುತ್ತಿದ್ದಾರೆ, ಅದು ನಿಲ್ಲಬೇಕೆಂದು ಮಾತ್ರ ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತಿದ್ದೇನೆ. ಇನ್ನೊಂದು ಪ್ರಮುಖವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ದೇಶದಲ್ಲಿರುವ ರೈತ ಸಂಘದ ಮುಖಂಡರುಗಳು, ಅನೇಕ ರಾಜ್ಯದ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮನ ಒಲಿಸಿ ಇವತ್ತು ಕಂಡೀಷನ್ ಹಾಕಿ ರೈತರ ಸಾಲ ಮನ್ನಾ ಮಾಡುವ ಯೋಜನೆಯನ್ನು ಏನು ಮಾಡಿದ್ದೀರಿ, ಅದರಿಂದ ಯಾರಿಗೂ ಅನುಕೂಲವಾಗುವುದಿಲ್ಲ.

ಆದಕ್ಕೋಸ್ಕರ ದಿನಾಂಕ 2-10-89 ರವರೆಗೆ ಯಾರು ಸಾಲಗಾರರಾಗಿದ್ದಾರೆ, ಸುಸ್ತಿದಾರ ಎನ್ನುವ ಪದವನ್ನು ತೆಗೆದುಹಾಕಿ, ಆಣೆವಾರು ಕಂಡೀಷನ್‌ನ್ನು ತೆಗೆದುಹಾಕಿ 10 ಸಾವಿರ ರೂಪಾಯಿಗಳವರೆಗೆ ಸಹಕಾರಿ ಸಾಲವನ್ನು ಯಾರ್ಯಾರು ಮಾಡಿದ್ದಾರೆ, ಅವರೆಲ್ಲರ ಸಾಲ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದಕ್ಕಾಗಿ ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಒಂದು ಸಂದರ್ಭದಲ್ಲಿ ಕೊನೆಯ ಪಕ್ಷ ಕೇಂದ್ರ ಸರ್ಕಾರ ಅಂತಿಮ ನಿಲುವು ತೆಗೆದುಕೊಳ್ಳಬಹುದು. ನಾವು ಈಗ ಯಾವ ರೀತಿಯ ಅಂತಿಮ ನಿಲುವು ತೆಗೆದು ಕೊಳ್ಳುವವರೆಗೂ ಮತ್ತು ಅವರ ಯೋಜನೆ ಏನು ಎಂಬುದು ರೈತರಿಗೆ ಗೊತ್ತಾಗುವವರೆಗೂ ಬಲಾತ್ಕಾರದಿಂದ ರೈತರಿಂದ ಸಾಲ ವಸೂಲು ಮಾಡುವ ಪ್ರಯತ್ನ ಏನು ನಡೆಯುತ್ತಿದೆ, ಇದನ್ನು ನಿಲ್ಲಿಸಬೇಕೆಂದು ಮಾತ್ರ ಇವತ್ತು ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸಭಾನಾಯಕರೂ ಇಲ್ಲೇ ಬಂದಿದ್ದಾರೆ. ನಿನ್ನೆ ಅತ್ಯಂತ ಸಂತೋಷದ ಸಂಗತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನೂ ಕೂಡ ರೈತಾಪಿ ಕುಟುಂಬದಿಂದ ಬಂದವನು, ಆ ಒಂದು ಹಿನ್ನಲೆಯಿಂದ ಬಂದಿದ್ದೇನೆ, ನಾನೂ ಒಬ್ಬ ರೈತ ಎಂದು ಅವರು ಹೇಳಿದ ಮಾತು ಕೇಳಿ ನನಗೆ ತುಂಬಾ ಆನಂದವಾಯಿತು. ಈ ರೀತಿ ರೈತ ಕುಟಂಬದ ಹಿನ್ನಲೆಯಲ್ಲಿ ಒಬ್ಬ ರೈತನಾಗಿ ಈ ರಾಜ್ಯದ ಮುಖ್ಯಮಂತ್ರಿಯಾಗಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಯೋಜನೆಯನ್ನು ರೈತರಿಗೆ ಅನುಕೂಲಮಾಡಿಕೊಳ್ಳುವ ಪ್ರಯತ್ನ ಮಾಡಿ; ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮೊದಲು ಕೇಂದ್ರ ಸರ್ಕಾರದ ಯಾವುದೇ ಯೋಜನೆಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿತ್ತಿದ್ದಂತಹವರು ಇವತ್ತು ಕೊನೆಯ ಪಕ್ಷ ಕೇಂದ್ರ ಸರ್ಕಾರದ ಯೋಜನೆಯನ್ನು ಜಾರಿಗೆ ಕೊಡುವುದಕ್ಕೆ ಅವರೂ ಒಪ್ಪಿಕೊಂಡಿದ್ದಾರೆ. ಇವತ್ತು ಕೇಂದ್ರ ಸರ್ಕಾರಕ್ಕೆ ಬೇರೆ ರಾಜ್ಯ ಮುಖ್ಯ ಮಂತ್ರಿಗಳು, ಅನೇಕ ರೈತ ಸಂಘದ ಮುಖಂಡರುಗಳು, ಇವತ್ತು ಕಂಡೀಷನ್ ಏನು ಇದೆ, 10 ಸಾವಿರವರೆಗಿನ ಸಾಲ ಮನ್ನಾ ಮಾಡುವುದರ ಬಗ್ಗೆ ಅದನ್ನು ಮಾಡಬೇಡಿ ಎಂದು ವಿನಂತಿ ಮಾಡಿಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರ ಪುನರ್‌ಪರಿಶೀಲನೆ ಮಾಡುತ್ತಿದೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪಹಣಿಯಲ್ಲಿ ಆಣೆವಾರು 8 ಆಣೆ ಒಳಗಡೆ ಇರತಕ್ಕಂತಹದ್ದು ಎಂದು ಒಂದು ಸಾವಿರ ಪಹಣಿ ಇಲ್ಲಿವೆ. ಅವುಗಳನ್ನು ನಾನು ತಮಗೆ ಕೊಡುತ್ತೇನೆ. ನಮ್ಮ ವ್ಯವಸ್ಥೆಯಲ್ಲಿ ಪಹಣಿಯಲ್ಲಿ ಆಣೆವಾರು ನಾವು ಬರೆಯುತ್ತಿಲ್ಲ. 8 ಆಣೆ ಒಳಗಡೆ ಯಾರ ಬೆಳೆ ಬೆಳೆಯುತ್ತಿಲ್ಲವೆಂಬುದನ್ನು ಗುರುತು ಮಾಡುವ ಹಾಗೆ ಪಹಣಿಯನ್ನು ಬರೆಯದೆ ಇರುವ ಸಂಧರ್ಭದಲ್ಲಿ, ಆದಕ್ಕೋಸ್ಕರ ಕೇಂದ್ರ ಸರ್ಕಾರದ ಕಂಡೀಷನ್ ಏನು ಇದೆ, ಎಲ್ಲ ರೈತರಿಗೆ 10 ಸಾವಿರವರೆಗಿನ ಸಾಲ ಮನ್ನಾ ಮಾಡುವ ವಿಚಾರವನ್ನು ವಿಚಾರ ಮಾಡುತ್ತಿರತಕ್ಕಂತಹ ಈ ಸಂದರ್ಭದಲ್ಲಿ ಬೇರೆ ರಾಜ್ಯದ ಸರ್ಕಾರಗಳು ಈ ರೀತಿಯ ಒತ್ತಾಯವನ್ನು ತರುತ್ತಿರುವ ಈ ಸಂದರ್ಭದಲ್ಲಿ ರಾಜ್ಯದ ರೈತರ ಹಿತದೃಷ್ಟಿಯಿಂದ ಕೊನೆಯಪಕ್ಷ ಎಲ್ಲ ರೈತರದ್ದು ಎಂದು ಆಲ್ಲ, ಹತ್ತು ಸಾವಿರ ರೂಪಾಯಿ ಸಾಲ ಮಾಡಿರುವ ರೈತರ ಸಾಲ ವಸೂಲಾತಿಗೆ ತಡೆ ಕೊಡಿ. ಕೊನೆಗೆ ಕೇಂದ್ರ ಅಥವಾ ರಾಜ್ಯ ಸರ್ಕಾರ ಒಪ್ಪಲಿಲ್ಲ ಎನ್ನುವ ಸಂದರ್ಭ ಬಂದರೆ ರೈತ ಸಾಲ ಸೋಲವನ್ನಾದರೂ ಮಾಡಿ ತನ್ನ ಸಾಲವನ್ನು ತೀರಿಸುತ್ತಾನೆ. ಆ ಸಮಯದಲ್ಲಿ ಬೇರೆ ಅನಿವಾರ್ಯ ಮಾರ್ಗಗಳನ್ನು ಹಿಡಿಯಬೇಕಾಗುತ್ತದೆ. ಆ ಸಮಯದಲ್ಲಿ ರೈತ ಬೀದಿಗೆ ಇಳಿಯುತ್ತಾನೆ. ಅಂತಹ ಸಮಯದಲ್ಲಿ ಹೋರಾಟ ಆಗಬಹುದು, ರಾಜ್ಯದಲ್ಲಿ ಕ್ರಾಂತಿ ಆಗಬಹುದು. ಆದಕ್ಕೆ ಅವಕಾಶ ಕೊಡದೇ ಕೊನೇ ಪಕ್ಷ ಏನು ಸಾಲ ವಸೂಲಾತಿ ಮಾಡಲಾಗುತ್ತಿದೆಯೋ ಅದಕ್ಕೆ ತಡೆಯಾಜ್ಞೆ ಕೊಡಿ. ಈಗಾಗಲೇ ಕೃಷಿ ಕಾರ್ಯ ಆರಂಭವಾಗಿದೆ. ರೈತನ ಹತ್ತಿರ ಬೀಜ ಹಾಗೂ ಗೊಬ್ಬರಕ್ಕೆ ದುಡ್ಡು ಇಲ್ಲದೇ ಇರುವ ಸಂದರ್ಭದಲ್ಲಿ, ಬೆಳೆ ತೆಗೆಯುವುದಕ್ಕೆ ಆತನಲ್ಲಿ ಹಣ ಇಲ್ಲದೇ ಇರುವ ಸಂದರ್ಭದಲ್ಲಿ ಬಲಾತ್ಕಾರದಿಂದ ಸಾಲವನ್ನು ವಸೂಲಿ ಮಾಡುವುದು ಆತನ ನ್ಯಾಚ್ಯುರಲ್ ಜಸ್ಟಿಸ್‌ಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ತಾವು ಅನೇಕ ಒಳ್ಳೆಯ ಕಾರ್ಯಗಳನ್ನು ಮಾಡುತ್ತಿದ್ದೀರಿ.

ಅಂತಹವನ್ನು ನಾವೂ ಕೂಡ ಶ್ಲಾಘನೆ ಮಾಡಿ, ಅಂತಹ ಕಾರ್ಯಗಳ ಬಗ್ಗೆ ನಾವೂ ನಿಮ್ಮ ಜೊತೆ ಇದ್ದೇವೆ, ತಾವು ಒಳ್ಳೆಯ ಕೆಲಸ ಮಾಡಿ ಎಂದು ಹೇಳಿದ್ದೇವೆ. ತಾವೂ ಕೂಡಾ ರೈತರ ಮಕ್ಕಳು ಎಂದು ಹೇಳುವಾಗ ತಾವು ರೈತರಿಗೆ ಅನ್ಯಾಯ ಆಗದ ರೀತಿಯಲ್ಲಿ ಸಾಲ ವಸೂಲಿಗೆ ತಡೆಯಾಜ್ಞೆ ಕೊಟ್ಟು ಹೊಸ ಯೋಜನೆ ರೂಪಿಸುವದರಲ್ಲಿ ದಿಟ್ಟ ಹೆಜ್ಜೆ ಇಟ್ಟು ರಾಜ್ಯದ ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಆಗ ಮಾತ್ರ ತಾವು ಆತನ ನೆರವಿಗೆ ಬಂದ ಹಾಗೆ ಆಗುತ್ತದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ತಾವು ಸ್ಪಷ್ಟವಾದ ನಿಲುವು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಈ ನಿಲುವಳಿ ಸೂಚನೆಯನ್ನು ತಂದಿದ್ದೇನೆ. ಇದರ ಹಿಂದೆ ಬರೀ ಯಡಿಯೂರಪ್ಪ ಒಬ್ಬನೇ ಇಲ್ಲ. ಇದರ ಹಿಂದೆ ಆ ಕಡೆಯ ಸದಸ್ಯರೂ ಇದ್ದಾರೆ. ಇದು ಈ ಸದನದ ಎಲ್ಲಾ ಸದಸ್ಯರಿಗೂ, ಬಡವರ ಬಗ್ಗೆ ಕಳಕಳಿ ಇರತಕ್ಕ ಎಲ್ಲರಿಗೂ ಆನ್ವಯವಾಗುವ ಪ್ರಶ್ನೆ ಇರುವುದರಿಂದ ಇವತ್ತು ಯಾರಿಗೂ ಸಮಾಧಾನ ಇಲ್ಲ. ನಾವು ಮಾರ್ಚಿ 19ನೇ ತಾರೀಖು ಸುಮಾರು 70 ರಿಂದ 80 ಸಾವಿರ ರೈತರು ಬಂದು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಾಗ, ಯಡಿಯೂರಪ್ಪನವರೇ ನನಗೆ ದಾರಿ ತೋರಿಸಿ, ದುಡ್ಡು ಇದ್ದರೆ ನಾನು ಸಾಲ ಮನ್ನಾ ಮಾಡುವುದಕ್ಕೆ ತಯಾರಿದ್ದೇನೆ, ರೈತರ ಬಗ್ಗೆ ನನಗೆ ಅನುಕಂಪ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಿದರು. ಇವತ್ತು ತಮ್ಮ ಹಣಕಾಸಿನ ಸಚಿವರೇ ಹೇಳಿದ್ದಾರೆ, ಹಣಕಾಸಿನ ಸ್ಥಿತಿ ಸುಧಾರಣೆಯಾಗಿದ್ದು, ಇನ್ನೂ ಸುಧಾರಣೆಯಾಗುವ ಸೂಚನೆ ಇದೆ ಎಂದು ಹೇಳಿದ್ದಾರೆ. ಈ ಸಾಲದ ಬಗ್ಗೆ ತಾವು ನಿರ್ಧಾರ ಮಾಡಿ ಇದಕ್ಕೆ ನಮ್ಮೆಲ್ಲರ ಸಹಕಾರ ಇದೆ. ಈ ರೀತಿಯ ಸಹಕಾರ ದೊರೆತು ಸುಧಾರಣೆ ಆಗುವ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳ ನ್ಯಾಯ ಸಿಗುವ ಔದಾರ್ಯ ತಮ್ಮಿಂದ ಆಗಬೇಕು. ಈಗ ಸದ್ಯಕ್ಕೆ ಸಾಲ ವಸೂಲಾತಿ ಏನು ಮಾಡುತ್ತಿದ್ದಾರೆ ಅದನ್ನು ತಡೆ ಮಾಡಿ. ವಿರೋಧ ಪಕ್ಷದ ನಾಯಕರೂ ನಿಮ್ಮ ಜೊತೆ ಬರುತ್ತಾರೆ. ನಾವೆಲ್ಲಾ ಹೋಗಿ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸೋಣ. ನಾನು ನಿಮ್ಮ ಸರ್ಕಾರವನ್ನು ಟೀಕೆ ಮಾಡುವುದಕ್ಕೆ ರೆಡಿ ಇಲ್ಲ. ಕೇಂದ್ರ ಸರ್ಕಾರ ಕೂಡ ರೈತರಿಗೆ ಕೊಟ್ಟ ಆಶ್ವಾಸನೆಯಂತೆ ನಡೆದುಕೊಳ್ಳದೆ ಅನ್ಯಾಯ ಮಾಡಿರುವುದರಿಂದ, ಇವತ್ತು ಕೇಂದ್ರ ರಾಜ್ಯಗಳ ಸಂಬಂಧದಿಂದ ಈ ಒಂದು ಪರಿಸ್ಥಿತಿಯಲ್ಲಿ ರೈತ ಹಾಳಾಗುತ್ತಿದ್ದಾನೆ. ಈ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ನಾವೂ ನೀವೂ ಎಲ್ಲಾ ಒಟ್ಟಿಗೆ ಡೆಲ್ಲಿಗೆ ಹೋಗೋಣ. ಕೇಂದ್ರದ ಹಣಕಾಸಿನ ಸಚಿವರ ಮತ್ತು ಪ್ರಧಾನಿಯವರ ಗಮನವನ್ನು ಇದರ ಬಗ್ಗೆ ಸೆಳೆಯೋಣ. ನಮ್ಮ ರೈತರು ಕಳೆದ 5 ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿದ್ದಾರೆ. ಇನ್ನೊಂದು ವಿಷಯ ಏನೆಂದರೆ ನಮ್ಮ ರಾಜ್ಯದಲ್ಲಿ ಏನು ಇಂಟರೆಸ್ಟ್ ಸಬ್ಸಿಡಿ ಸ್ಕೀಮ್ ತಂದಿದ್ದೇವೆ ಇದರ ಪರಿಣಾಮವಾಗಿ ಇವತ್ತು ನಮ್ಮಲ್ಲಿ ಸಾಲಗಾರರಿಲ್ಲ, ಸುಸ್ತಿದಾರರು ಇಲ್ಲ. ಹೀಗಾಗಿ ಇವತ್ತು ನೂರಕ್ಕೆ 5 ಜನರಿಗೆ ಅನುಕೂಲವಾಗುವುದಿಲ್ಲ. ಇದು ತಮಗೆ ಗೊತ್ತಿದೆ, ಕೇಂದ್ರ ಸರ್ಕಾರದ ಈ ಒಂದು ಯೋಜನೆ ನಮ್ಮ ರಾಜ್ಯಕ್ಕೆ ಅನುಕೂಲವಾಗುವುದಿಲ್ಲ ನಾವು ಇದನ್ನು ಮಾಡುವುದಿಲ್ಲ ಎಂದು ಬೇಕಾದರೆ ಹೇಳಿ ಆದನ್ನು ನಾನು ಮೆಚ್ಚುತ್ತೇವೆ. ಈ ಯೋಜನೆಯಿಂದ ರಾಜ್ಯದಲ್ಲಿ ನೂರರಲ್ಲಿ ಐದು ಜನರಿಗೆ ಕೂಡಾ ಅನುಕೂಲವಾಗದೇ ಇರುವಾಗ ಇದನ್ನು ಜಾರಿಗೆ ತಂದರೆ ರೈತರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ನರಗುಂದ, ನವಲಗುಂದದಲ್ಲಿ ಏನು ಒಂದು ಅಶಾಂತಿ ವಾತಾವರಣ ನಿರ್ಮಾಣವಾಗಿತ್ತು ಅಂತಹ ವಾತಾವರಣ ನಮ್ಮ ರಾಜ್ಯದಲ್ಲಿ ಉಂಟಾಗಬಹುದು. ಇವತ್ತು ದೇಶದ ಬೇರೆ ಬೇರೆ ರೈತ ಸಂಘಗಳು, ಬೇರೆ ಬೇರೆ ರಾಜಕೀಯಪಕ್ಷಗಳ ಮುಖಂಡರು ಕೇಂದ್ರ ಸರ್ಕಾರದ ಈ ರೈತವಿರೋಧಿ ಸಾಲದ ನೀತಿಯ ವಿರುದ್ಧ ಹೋರಾಟ ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಎಲ್ಲಾ ಭಾರವನ್ನು ನಿಮ್ಮ ಮೇಲೆ ಏರುವುದಕ್ಕೆ ಹೋಗುವುದಿಲ್ಲ. ಅನೇಕ ಬಾರಿ ತಾವು ಹೇಳಿದ್ದೀರಿ. ನೀವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿಲ್ಲ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕೂಡಾ ಕೇಂದ್ರ ಸರ್ಕಾರದ ಮನವೊಲಿಸುತ್ತೇವೆಂದು, ಕೇಂದ್ರ ಸರ್ಕಾರವನ್ನು ಕೇಳುತ್ತೇವೆಂದು ಹೇಳಿದ್ದೀರಿ. ತಾವು ಅನೇಕ ಬಾರಿ ಹೇಳಿದ್ದೀರಿ. ಇವತ್ತು ಕೇಂದ್ರ ಸರ್ಕಾರ ನಿಮ್ಮ ಕೈಯಲ್ಲಿ ಇದ್ದಿದ್ದರೆ ಅಲ್ಲಿರುವಂತಹ ನಿಮ್ಮ

ಪ್ರಧಾನಿಯವರ ಮನಸ್ಸನ್ನು ಒಲಿಸುತಿರಲಿಲ್ಲವೇ? ಈ ಒಂದು ವಿಚಾರವನ್ನು ತಾವು ತಾತ್ವಿಕವಾಗಿ ಒಪ್ಪಿಕೊಂಡ ಮೇಲೆ ತಮಗೆ ಈ ಬಗ್ಗೆ ಮನವರಿಕೆಯಾಗಿದೆಯಂದಾಯಿತು. ಪರಿಸ್ಥಿತಿ ಹೀಗಿರಬೇಕಾದರೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರೋಣ. ಎಲ್ಲರಿಗೂ ಅನುಕೂಲ ಆಗುವ ಹಾಗೆ ತಾವು ತಮ್ಮ ನೇತೃತ್ವದಲ್ಲಿ ಎಲ್ಲ ವಿರೋಧ ಪಕ್ಷದ ನಾಯಕರನ್ನು ಕರೆದುಕೊಂಡು ಹೋದರೆ ಕೇಂದ್ರ ಸರ್ಕಾರ ನಿಶ್ಚಿತವಾಗಿ ಈ ಬಗ್ಗೆ ಪರಿಶೀಲಿಸುತ್ತದೆಂದು ನನಗೆ ನಂಬಿಕೆ ಇದೆ. ನಾಳೆ ದಿವಸ ಅನೇಕ ರಾಜ್ಯಗಳ ರೈತ ಮುಖಂಡರ ಒತ್ತಾಯಕ್ಕೆ ಮಣಿದು ಕೇಂದ್ರ ಸರ್ಕಾರ ಹತ್ತು ಸಾವಿರ ರೂಪಾಯಿಗಳವರೆಗಿನ ಎಲ್ಲಾ ರೈತರ ಸಾಲವನ್ನೂ ಯಾವುದೇ ಕಂಡೀಷನ್ ಇಲ್ಲದೇ ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡರೆ ಈಗ ಏನು ಬಲಾತ್ಕಾರದಿಂದ ಸಾಲ ವಸೂಲಿಯಾಗಿದೆ ಆ ಹಣವನ್ನು ವಾಪಸ್ಸು ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇವತ್ತು ಆ ಬಡವ ಏನೋ ಮಾಡಿ ಹಣ ಕಟ್ಟಿದ್ದಾನೆ. ಅವನಿಗೆ ಆ ಹಣವನ್ನು ವಾಪಸ್ಸು ಕೊಡುವ ಸ್ಥಿತಿ ಬರುವುದಿಲ್ಲ. ಇವತ್ತು ಈ ಬಗ್ಗೆ ಜನತಾ ಪಾಗೂ ಜನತಾದಳದ ಪಕ್ಷದ ಅನೇಕ ಮುಖಂಡರು ಸಹಾ ಸಹಿ ಮಾಡಿದ್ದಾರೆ. ಇದರ ಬಗ್ಗೆ ಸರಿಯಾದ ನಿಲುವು ತೆಗೆದುಕೊಂಡು ರೈತರಿಗೆ ಅನುಕೂಲವಾಗುವ ದೃಢ ನಿರ್ಧಾರವನ್ನು ಸಭಾ ನಾಯಕರು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಸುದೀರ್ಘ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಬಹುಶಃ ಇಲ್ಲಾ ಯಡಿಯೂರಪ್ಪನವರೇ, ತಾವು ಕೇಳುತ್ತಿರುವುದು ಸರಿಯಲ್ಲ, ತಮ್ಮ ವಾದ ಏನು ಇದೆ ಇದು ಸರಿಯಲ್ಲ ಈ ರಾಜ್ಯದ ರೈತರ ಸಾಲ ಮಾಡುವ ನೀತಿಯೇ ಸರಿಯಲ್ಲ, ಇದಕ್ಕೆ ನಾವು ವಿರೋಧ ಮಾಡುತ್ತೇವೆಂದರೆ ನಾನು ಈ ಬಗ್ಗೆ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಬೀದಿಗೆ ಇಳಿಯಬೇಕಾಗುತ್ತದೆ. ರೈತರನ್ನು ಕರೆದುಕೊಂಡು ಬರಬೇಕಾಗುತ್ತದೆ. ಇದೇ ಸೆಪ್ಟೆಂಬರ್ ಮೂರನೇ ವಾರದಲ್ಲಿ ಪ್ರತಿಯೊಂದು ಜಿಲ್ಲಾಧಿಕಾರಿಗಳ ಕಛೇರಿಗೆ 10 ಸಾವಿರ ಜನ ರೈತರನ್ನು ಕರೆದುಕೊಂಡು ಹೋಗಿ ಜಿಲ್ಲಾಧಿಕಾರಿಗಳಿಗೆ ಮುತ್ತಿಗೆ ಹಾಕಬೇಕೆಂದು ಮಾಡಿದ್ದೇವೆ. ಈ ಬಗ್ಗೆ ನಿನ್ನೆ ಬಿಜೆಪಿಯ ಸ್ಟೇಟ್ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್‌ನಲ್ಲಿ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇವತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಯಿಂದಾಗಿ ರೈತ ಬಡವಾಗುತ್ತಿದ್ದಾನೆ. ರೈತ ಇವತ್ತು ಅನ್ಯಾಯಕ್ಕೆ ಒಳಗಾಗಿದ್ದಾನೆ. ಆದ್ದರಿಂದ ಇಲ್ಲಿ ರೈತರಿಗೆ ಅನುಕೂಲ ಆಗುವ ಯೋಜನೆಯನ್ನು ತಯಾರು ಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಒತ್ತಾಯ ಮಾಡುತ್ತೇನೆ.

+ ಪ್ರೊ.ಎಂ.ಡಿ. ನಂಜುಂಡಸ್ವಾಮಿ: (ಧಾರವಾಡ (ಗ್ರಾಮಿಣ):- ಸನ್ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ನಮ್ಮ ಕೃಷಿ ಮಂತ್ರಿಗಳ ಬೇಡಿಕೆ ಬಂದಾಗ ತಾವು ಇಲ್ಲಿ ಇರಲಿಲ್ಲ. ಆದರೆ ಆ ಚರ್ಚೆ ನಡುವೆ ಸರ್ಕಾರಿ ದಾಖಲೆಗಳು ಮತ್ತೆ ಸರ್ಕಾರದ ನೀತಿ ಎಲ್ಲದರ ವಿಶ್ಲೇಷಣೆ ಆಯಿತು. ಆ ವಿಶ್ಲೇಷಣೆ ಮಾಡಿದವನು ನಾನು. ಆ ವಿಶ್ಲೇಷಣೆ ಆದಮೇಲೆ ಆಡಳಿತ ಪಕ್ಷದ ಬಹಳ ಜನ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಈ ದೇಶದ ರೈತರು ಸಾಲಗಾರರಲ್ಲ. ರೈತರಿಗೆ ಸರ್ಕಾರಗಳಿಂದ ಬಾಕಿ ಬರಬೇಕಾಗಿದೆ ಎಂಬುದು ಸ್ಪಷ್ಟವಾಗಿದೆ. ಅವತ್ತು ಮುಖ್ಯಮಂತ್ರಿಯವರು ಹಾಜರಿರಲಿಲ್ಲ. ಬೇಕಾದರೆ ಈಗ ತಾವು ಕೃಷಿ ಮಂತ್ರಿಗಳನ್ನು ಕರೆಸಬಹುದು. ಅವರನ್ನು ತಾವೇ ನೇರವಾಗಿ ಪ್ರಶ್ನೆಯನ್ನು ಕೇಳಬಹುದು. ರೈತರು ಸಾಲಗಾರರೆ ಅಥವಾ ರೈತರಿಗೆ ಸರ್ಕಾರಗಳು ಮೋಸಮಾಡಿವೆಯೇ? ಆದ್ದರಿಂದ ಸರ್ಕಾರಗಳು ರೈತರ ಋಣಿಯಲ್ಲಿವೆ. ರೈತರ ಋಣವನ್ನು ಸರ್ಕಾರವೇ ತೀರಿಸಬೇಕು. ನಮ್ಮ ಹಿರಿಯ ಸದಸ್ಯರಾದ ಶ್ರೀ ರಂಗನಾಥ್‌ರವರು ಇದರ ಬಗ್ಗೆ ಚರ್ಚೆ ನಡೆಯುತ್ತಾ ಇದ್ದಾಗ ಹಾಜರಿದ್ದರು. ಯಾವರೀತಿ ನಾವು ಸರ್ಕಾರದ ಕಾನೂನುಗಳ ಮೂಲಕ ರೈತರಿಗೆ ಮೋಸಮಾಡಿದ್ದೇವೆ ಎಂಬುದು ಅವತ್ತು ಸ್ಪಷ್ಟವಾಗಿತ್ತು. ನಮ್ಮ ರೈತರ ಮಕ್ಕಳು ಇಲ್ಲಿ 224 ಜನ ಇದ್ದಾರೆಂದು ತಿಳಿದಿದ್ದೇವೆ. ತಾವು ಬೇಕಾದರೆ ಈ ವಿಚಾರವನ್ನು ಮತಕ್ಕೆ ಹಾಕಬಹುದು. ಈ ಸಭೆಯಲ್ಲಿ ಮತಕ್ಕೆ ಹಾಕಿದರೆ ರೈತರು ಸಾಲಗಾರರೂ ಅಥವಾ ರೈತರು ಸಾಲಗಾರರಲ್ಲವೂ, ರೈತರಿಗೆ ಸರ್ಕಾರಗಳು ಮೋಸಮಾಡಿವೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ಮೋಸ ಮಾಡಿದ್ದರೆ

ಸರ್ಕಾರದ ಕರ್ತವ್ಯವಿದೆ. ಆ ಸಾಲ ರದ್ದಾಗಬೇಕೋ ಬೇಡವೋ ಎಂಬ ವಿಷಯವನ್ನು ದಯವಿಟ್ಟು ತಾವು ಈ ಸಭೆಯ ಮತಕ್ಕೆ ಹಾಕಿ ತೀರ್ಮಾನ ಮಾಡಬೇಕು.

† ಶ್ರೀ ಸಿ. ಬೈರೆಗೌಡ: (ವೇಮಗಲ್) :- ಸನ್ಮಾನ್ಯ ಅಧ್ಯಕ್ಷರೆ, ಈ ವಿಧಾನ ಸಭೆಯಲ್ಲಿ ಈ ಬಗ್ಗೆ ಇಲ್ಲಿಯವರೆಗೆ ಸಾಕಷ್ಟು ಚರ್ಚೆಯಾಗಿದೆ. ಈ ಸಮಸ್ಯೆಯ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಹಿಂದೆಯೂ ಕೂಡ ಚರ್ಚೆಯಾಗಿದೆ, ಅದನ್ನು ಜ್ಞಾಪಿಸಿಕೊಳ್ಳಬೇಕು. ಇಷ್ಟೆಲ್ಲ ನಾವು ಒತ್ತಾಯ ಮಾಡಿದರೂ, ಒಂದು ಸಲ ಅಲ್ಲ ಅನೇಕ ಬಾರಿ ಒತ್ತಾಯ ಮಾಡಿದರೂ ಇದುವರೆಗೆ ಏನು ಪ್ರಯೋಜನವಾಗಿಲ್ಲ. ನಮ್ಮ ಕೈಯಲ್ಲಿ ಈ ಸದನದಲ್ಲಿ ಪ್ರಜಾಸತ್ತಾತ್ಮಕವಾಗಿ ಏನೇನು ನಡೆಸುವುದಕ್ಕೆ ಸಾಧ್ಯವೋ ಅವೆಲ್ಲವನ್ನೂ ಮಾಡಿದ್ದೇವೆ. ಆದರೆ ಪ್ರತಿಫಲ ಏನಾಗಿದೆಯೆಂದರೆ, ಬೆಟ್ಟ ಅಗೆದು ಇಲಿ ಕೂಡಸಿಗಲಿಲ್ಲ; ಇಲಿ ಬಾಲ ಕೂಡ ಸಿಗುತ್ತದೋ ಇಲ್ಲವೊ ಎಂಬ ಅನುಮಾನ ಇವತ್ತು ನಮ್ಮನ್ನು ಪೀಡಿಸುತ್ತಿದೆ. ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ಪ್ರತಿಯೊಂದು ಹಳ್ಳಿಯಲ್ಲೂ ರೈತರು ಕೇಳುತ್ತಾರೆ. 'ನಮ್ಮ ಸಾಲವನ್ನು ವಜಾ ಮಾಡಿಸುತ್ತೀರೊ ಇಲ್ಲವೊ ಎಂದು ಕೇಳುತ್ತಾರೆ.' ಅವರ ಮುಂದೆ ತಲೆ ತಗ್ಗಿಸುವಂತಹ ಪರಿಸ್ಥಿತಿ ಇವತ್ತು ನಮಗೆ ಉಂಟಾಗಿದೆ. ಏತಕ್ಕೆಂದರೆ ಇದಕ್ಕೆ ಸಾಕಷ್ಟು ಪ್ರಚಾರ ಬರುತ್ತಿದೆ. ಕೇಂದ್ರ ಸರ್ಕಾರದಿಂದ ಅವರ ನೀತಿಯ ಬಗ್ಗೆ ಪ್ರಚಾರ ದೊರಕಿದೆ. ನಮ್ಮ ರಾಜ್ಯದಲ್ಲಿ ಆದರಲ್ಲೂ ಈ ಸದನದಲ್ಲಿ ನಡೆದಂಥ ಚರ್ಚೆಯಿಂದಲೂ ಸಾಕಷ್ಟು ಪ್ರಚಾರ ದೊರೆತಿದೆ. ಇವುಗಳ ಪ್ರತಿಫಲ ಇವತ್ತು ಏನಾಗಿದೆಯೆಂದರೆ, ನಾವು ಸಾಲ ವಾಪಸ್ ಕೊಡದಿದ್ದರೆ ನಮ್ಮನ್ನು ಕೇಳುವವರೇ ಇಲ್ಲ, ನಾವು ಕೊಡಬೇಕಾದ ಸಾಲವನ್ನು ವಾಪಸ್ಸು ಕೊಡಬೇಕಾಗಿಲ್ಲ – ಎನ್ನತಕ್ಕ ತೀರ್ಮಾನಕ್ಕೆ ರೈತರು ಬಂದುಬಿಟ್ಟಿದ್ದಾರೆ. ಯಾವ ಶಕ್ತಿ ಬಂದರೂ ಕೂಡ ನೀವು ಸಾಲ ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ಅಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ. ಇದು ಖಂಡಿತ ಸಾಧ್ಯವಿಲ್ಲ. ಸರ್ಕಾರ ಎಷ್ಟು ಮೊಂಡಾಟವಾಡಿದರೂ ಶೇಕಡ 5 ರಷ್ಟು ಕೂಡ ವಸೂಲಿ ಮಾಡಲು ಸಾಧ್ಯವಿಲ್ಲದಿರತಕ್ಕ ಒಂದು ಪರಿಸ್ಥಿತಿ ಈ ಗ್ರಾಮಾಂತರ ಪ್ರದೇಶದಲ್ಲಿ ನಿರ್ಮಾಣವಾಗಿದೆ. ರೈತರು ಇವತ್ತು ಈ ಒಂದು ತೀರ್ಮಾನಕ್ಕೆ ಬಂದುಬಿಟ್ಟಿದ್ದಾರೆ, ಮನಸ್ಸನ್ನೂ ಮಾಡಿದ್ದಾರೆ ಇವತ್ತು ಕೇಂದ್ರಸರ್ಕಾರವನ್ನು ಒಂದು ಯೋಜನೆ ಕೊಟ್ಟಿದ್ದಾರೆ, ನಾವು ಅದನ್ನು ನೋಡಿದ್ದೇವೆ. ಅದರಿಂದ ಯಾರಿಗೆ ಪ್ರಯೋಜನವಾಗುತ್ತದೆ? ಶೇಕಡ 2 ರಷ್ಟು ರೈತರಿಗೆ ಅದರಿಂದ ಪ್ರಯೋಜನವಾಗುವುದಿಲ್ಲ. ಈ ವಿಚಾರದ ಬಗ್ಗೆ ನಮ್ಮ ರಾಜ್ಯದಲ್ಲಿ ಅಲ್ಲ, ಇಡೀ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಉಪ ಪ್ರಧಾನಮಂತ್ರಿಗಳಾಗಿರತಕ್ಕ ಶ್ರೀಮಾನ್ ದೇವಿಲಾಲ್‌ರವರು ಕೂಡ ಇದರ ಬಗ್ಗೆ ಹೇಳಿದ್ದಾರೆ. 10ಸಾವಿರ ರೂಪಾಯಿಗಳವರೆಗಿನ ರೈತರ ಸಾಲವನ್ನು ವಜಾ ಮಾಡುತ್ತೇವೆನ್ನುವ ನಿರ್ಧಾರ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ನಾವು ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಕೇಂದ್ರಸರ್ಕಾರದ ಆರ್ಥಮಂತ್ರಿಗಳು ಹೇಳಿದ್ದಾರೆ. ಇವತ್ತು ಈ ರೀತಿಯಾದ ವಾತಾವರಣ ನಿರ್ಮಾಣವಾಗಿದೆ. ವಾತಾವರಣ ಈ ರೀತಿಯಾಗಿ ನಿರ್ಮಾಣವಾಗಿರತಕ್ಕ ಪರಿಸ್ಥಿತಿಯಲ್ಲಿ ನೀವು ಮೊಂಡಾಟ ಆಡಿ ಏನೋ ಮಾಡಿ ಸಾಲ ವಸೂಲಿ ಮಾಡುತ್ತೇವೆ ಸಾಲ ವಸೂಲಿಯಾಗುತ್ತದೆಂದು ತಿಳಿದುಕೊಂಡಿದ್ದರೆ ಅದನ್ನು ಕನಸಿನಲ್ಲಿಯೂ ಮಾಡುವುದಕ್ಕೆ ಸಾಧ್ಯವಿಲ್ಲ, ಅದನ್ನು ಮರೆತು ಬಿಡಿ. ಈ ಸಾಲವನ್ನು ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ನೀವು ಹೋಗಿ, ನಾವು ಅಲ್ಲೆ ಬಂದು ಕುಳಿತರೂ ನಮ್ಮ ಕೈಯಲ್ಲೂ ಸಾಲ ವಸೂಲಿ ಮಾಡುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿ, ಈ ರಾಜ್ಯದಲ್ಲೇ ಅಲ್ಲ ಈ ದೇಶದಲ್ಲಿ ನಿರ್ಮಾಣವಾಗಿದೆ. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ, ನೀವು ಮೊಂಡಾಟ ಮಾಡುವುದಕ್ಕೆ ಹೋಗಬೇಡಿ. ಇದರಿಂದ ನಿಮಗೆ ಯಶಸ್ವಿಯಾಗುವುದಿಲ್ಲ. ಆದರಿಂದ ಪ್ರಯೋಜನವಾಗುವುದಿಲ್ಲ. ಸಾಲ ವಸೂಲಿ ಕೂಡ ಮಾಡುವುದಕ್ಕಾಗುವುದಿಲ್ಲ. ಇವತ್ತು ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗೆ ಆಗಿರುವ ಕಾರಣದಿಂದ, ಕರ್ನಾಟಕ ಅನೇಕ ವಿಚಾರಗಳಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶನ ಕೊಡತಕ್ಕ ನೀತಿಯನ್ನು ಅನುಸರಿಸಿರತಕ್ಕದ್ದನ್ನು ನಾವು ನೋಡಿದ್ದೇವೆ. ಈ ವಿಚಾರದಲ್ಲಿ, ಆದರಲ್ಲೂ ರೈತರ ವಿಚಾರದಲ್ಲಿ, ಬೇರೆ ರಾಜ್ಯಗಳಿಗೆ ಮತ್ತು ಕೇಂದ್ರಕ್ಕೆ ಕಣ್ಣು ತೆರಸತಕ್ಕ ರೀತಿಯಲ್ಲಿ ನೀವು ಮುಂದೆ ಬನ್ನಿ.

ನೀವು ಅನೇಕ ಸಾರಿ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಅದು ಇಲ್ಲವೆಂದು ಹೇಳಿದ್ದೀರಿ. ಅದು ರಾಷ್ಟ್ರೀಯರಂಗದ ಅಥವಾ ದಳದ ಚುನಾವಣಾ ಪ್ರಣಾಳಿಕೆಯಲ್ಲಿ ಇದೆ, ನಾವು ಇದಕ್ಕೆ ಬದ್ದರಲ್ಲ ಎನ್ನುವ ವಾದವನ್ನು ಸಮರ್ಪಕವಾಗಿ ಮಂಡಿಸಿದ್ದೀರಿ. ಆ ವಾದ ಸರಿಯಲ್ಲವೆಂದು ನಾನು ಹೇಳುವವನಲ್ಲ. ಆದರೆ ಇವತ್ತಿನದಿವಸ ಆಗಿರತಕ್ಕದ್ದು ಏನು? ಹಾಗಾದರೆ ಚುನಾವಣಾ ಪ್ರಣಾಳಿಕೆಯಲ್ಲಿರತಕ್ಕದ್ದನ್ನು ಬಿಟ್ಟು ಸರ್ಕಾರ ಬೇರೆಯದನ್ನು ಜಾರಿಗೆ ತರುವುದಿಲ್ಲವೆ? ಆದ್ದರಿಂದ ತಾವು ಮೊಂಡಾಟ ಆಡುವುದಕ್ಕೆ ದಯವಿಟ್ಟು ಹೋಗಬೇಡಿ. ನಿಮ್ಮ ಕೈಯಲ್ಲಿ ಸಾಲ ವಸೂಲಿ ಮಾಡುವುದಕ್ಕಾಗುವುದಿಲ್ಲ. ಎಷ್ಟೇ ಶಕ್ತಿ ಮತ್ತು ಬಲವನ್ನು ಉಪಯೋಗಿಸಿದರೂ ಅದು ನಿಷ್ಪ್ರಯೋಜನವಾಗುತ್ತದೆ. ಆದರಿಂದ ನಿಮಗೆ ಫಲ ಸಿಗುವುದಿಲ್ಲ. ಈ ಕಾರಣದಿಂದ ದಿಟ್ಟ ನಿಲುವು ತಳೆದು ಇಡೀ ದೇಶಕ್ಕೆ ಮಾರ್ಗದರ್ಶನವಾಗತಕ್ಕ ರೀತಿಯಲ್ಲಿ ತಮ್ಮ ನೀತಿಯನ್ನು ಪ್ರಸಾರ ಮಾಡಬೇಕು. ಜೊತೆಗೆ ವಸೂಲಿ ಕಾರ್ಯಕ್ರಮವನ್ನು ಕೂಡ ನಿಲ್ಲಿಸಬೇಕು.

ಅಧ್ಯಕ್ಷರು:- ಯಾರೂ ಕೊಡುವುದಿಲ್ಲ, ವಸೂಲಿ ಮಾಡಬೇಡಿಯೆಂದು ಹೇಳುತ್ತೀರಾ?

ಶ್ರೀ ಸಿ. ಭೈರೇಗೌಡ:- ಆದ್ದರಿಂದ ತಾವು ಇದಕ್ಕೆ ದೃಢ ನಿರ್ಧಾರ ಮಾಡಿ

ಅಧ್ಯಕ್ಷರು:- ಮೊಂಡಾಟ ಮಾಡಬೇಡಿ, ದೃಢ ನಿರ್ಧಾರ ಮಾಡಿ ಅಷ್ಟೆ ತಾನೇ?

ಶ್ರೀ ಸಿ. ಭೈರೇಗೌಡ:- ಅಷ್ಟೇಸ್ವಾಮಿ.

† ಶ್ರೀ ವಾಟಾಳ್‌ನಾಗರಾಜ್: (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಇವತ್ತು ನಿಲುವಳಿ ಸೂಚನೆಯನ್ನು ನಾವೆಲ್ಲ ಸಹಿ ಮಾಡಿ ತಮಗೆ ಕೊಟ್ಟಿದ್ದೇವೆ. ಪ್ರಶ್ನೆಯಾದರೂ ಇಷ್ಟೆ. ರೈತರ ಸಾಲವನ್ನು ಕೇಂದ್ರದವರು ವಜಾಮಾಡಬೇಕೇ, ರಾಜ್ಯದವರು ವಜಾಮಾಡಬೇಕೇ ಎನ್ನುವುದರಲ್ಲಿ ರೈತರು ಬಹಳ ಗೊಂದಲದಲ್ಲಿದ್ದಾರೆ ಮತ್ತೆ ರೈತರೂ ಕೂಡ ಇವತ್ತು ಸಾಲ ಕೊಡವ ಮಟ್ಟದಲ್ಲಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ವಾಟಾಳ್‌ರವರೇ ಒಂದು ನಿಮಿಷ. ರೈತರ ಸಾಲವನ್ನು ರಾಜ್ಯಸರ್ಕಾರದವರು ವಜಾಮಾಡಬೇಕೇ, ಕೇಂದ್ರಸರ್ಕಾರದವರು ವಜಾಮಾಡಬೇಕೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಯಾರು ಅರ್ಧಬೆಲೆಯಲ್ಲಿ ಊಟಮಾಡಿದ್ದಾರೊ ಅವರು ವಜಾಮಾಡಬೇಕು.

ಶ್ರೀ ವಾಟಾಳ್‌ನಾಗರಾಜ್:- ಅದು ಸರಿ. ನನಗನ್ನಿಸುತ್ತದೆ, ಇವತ್ತು ಇವರಿಬ್ಬರ ಗೊಂದಲದಲ್ಲಿ, ಇವರಿಬ್ಬರ ತಿಕ್ಕಾಟದಲ್ಲಿ ರೈತ ಮೂರನೆಯವನಾಗಿ ಬಹಳ ತೊಂದರೆಪಡತಕ್ಕ ಪರಿಸ್ಥಿತಿ ಬಂದಿದೆ. ಇವತ್ತು ರೈತರು ಸಾಲವನ್ನು ವಾಪಸ್ಸು ಕೊಡಲು ತಯಾರಾಗಿಲ್ಲ. ಇದು ಸ್ಪಷ್ಟ ನೀತಿ. ನೀವು ಯಾವುದೇ ರೀತಿಯಲ್ಲಿ ಅವರ ಮೇಲೆ ಒತ್ತಡ ತಂದರೂ ಅವರು 10ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಕೊಡುವಹಾಗೆ ಇಲ್ಲವೆನ್ನುವ ತೀರ್ಮಾನಕ್ಕೆ ಅವರು ಬಂದಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರದ ಸ್ಪಷ್ಟವಾದ ನೀತಿ, ನಿಲುಮೆ ಏನು ಎನ್ನುವುದನ್ನು ತಿಳಿದುಕೊಳ್ಳಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವರ ನೇತೃತ್ವದಲ್ಲಿ ವಿರೋಧಪಕ್ಷಗಳ ಎಲ್ಲ ಮುಖಂಡರ ನಿಯೋಗವನ್ನು ಕೇಂದ್ರಕ್ಕೆ ಕರೆದುಕೊಂಡು ಹೋಗಿ ಅವರ ಜೊತೆಯಲ್ಲಿ ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬರಬೇಕು. ಆ ರೀತಿ ಒಂದು ತೀರ್ಮಾನಕ್ಕೆ ಬರುವವರೆಗೆ ಯಾವುದೇ ವಿಧವಾದ ಸಾಲವನ್ನು ವಸೂಲಿ ಮಾಡಬಾರದೆನ್ನುವ ನಿರ್ಧಾರಕ್ಕೆ ಸರ್ಕಾರ ಬರಬೇಕು. ಅದು ಇಲ್ಲದಿದ್ದರೆ, ಎಷ್ಟೇ ಒತ್ತಡ ತಂದರೂ, ಯಾವುದೇ ಒತ್ತಡ ತಂದರೂ ರೈತರು ಸಾಲವನ್ನು ಕೊಡುವುದಕ್ಕೆ ತಯಾರಾಗಿಲ್ಲ ಮತ್ತೆ ನೀವು ಬೇರೆ ಒತ್ತಡದಿಂದ ಸಾಲವನ್ನು ವಸೂಲಿ ಮಾಡುವುದಕ್ಕೆ ಹೋದರೆ ನಾವೆಲ್ಲ ಸಾಲವನ್ನು ಕೊಡಲೇಬೇಡಿಯೆಂದು ಎಲ್ಲ ಕಡೆ ದೊಡ್ಡ ಹೋರಾಟಕ್ಕೆ ಎಲ್ಲರೂ ಒಗ್ಗಟ್ಟಾಗಿ ನಿಲ್ಲತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಈ ರಾಜ್ಯದಲ್ಲಿ ಗಂಭೀರ ಪರಸ್ಥಿತಿ ನಿರ್ಮಾಣವಾಗುವುದಕ್ಕೆ ಅವಕಾಶ ಮಾಡಿಕೊಡದೆ, ಈಗ ಸಾಲ ವಸೂಲಿ ಮಾಡುತ್ತಿರುವುದಕ್ಕೆ ತಕ್ಷಣ ತಡೆ ಯಾಜ್ಞೆ ನೀಡಿ, ನಾವು ಕೇಂದ್ರದಲ್ಲಿ ಮಾತುಕತೆ ಆಡುತ್ತಿದ್ದೇವೆ, ಅಲ್ಲಿಯವರೆಗೆ ರಾಜ್ಯಸರ್ಕಾರ ಸಾಲ ವಸೂಲಿ ಮಾಡುವುದಿಲ್ಲ ಎನ್ನುವ ನಿರ್ಧಾರಕ್ಕೆ ಬರಬೇಕು. ಆದಕ್ಕಾಗಿ ಚರ್ಚೆಗೆ ದಯವಿಟ್ಟು ತಾವು ಈ ಒಂದು ಸೂಚನೆಯನ್ನು

ಒಪ್ಪಬೇಕು ಮತ್ತು ನಮಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

+ಶ್ರೀ ವೀರೇಂದ್ರ ಪಾಟೀಲ್: (ಮುಖ್ಯಮಂತ್ರಿಗಳು)- ಮಾನ್ಯ ಅಧ್ಯಕ್ಷರೇ ರೈತರ ಸಾಲ ಮನ್ನಾ ಆಗಬೇಕು ಎಂಬುದು ಮಾನ್ಯ ಯಡಿಯೂರಪ್ಪನವರ ಪೆಟ್ ಸಬ್ಜೆಕ್ಟ್ ಇದು ಬಹುಶಃ ಇನ್ನು ಇರುವ ನಾಲ್ಕೂವರೆ ವರ್ಷದಲ್ಲಿ ಅವರು ಇದೇ ಮಾಡುವ ಹಾಗೆ ಕಾಣುತ್ತದೆ. ಈ ಸಭೆಯಲ್ಲಿ ಮತ್ತೇನೂ ಮಾಡುವುದಕ್ಕೆ ಅವರು ತಯಾರಿಲ್ಲ. ಈಗ ಅವರು ಹೇಳಿದ್ದು.....

ಶ್ರೀ. ಸಿ. ಬೈರೇಗೌಡ:- ನಾಲ್ಕೂವರೆ ವರ್ಷ ಅಲ್ಲ, ಇನ್ನು ಹೆಚ್ಚಿಗೆ ವರ್ಷ ಅವಕಾಶ ಸಿಕ್ಕಿದರೂ ಅದನ್ನೇ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್:- ನೋಡಿ, ನೀವು ಹೇಳುವುದಕ್ಕೆ ಬಂದಿದ್ದೀರಿ, ನಾವು ಹೇಳುವುದಕ್ಕೆ ಬಂದಿದ್ದೇವೆ. ನಾವು ಹೇಳಿದ್ದನ್ನು ನೀವು ಕೇಳಬೇಕು, ನೀವು ಹೇಳಿದ್ದನ್ನು ನಾವು ಕೇಳಬೇಕು. ನೀವು ಹೇಳಿದ್ದನ್ನೇ ನಾವು ಕೇಳಬೇಕು ಎನ್ನುವುದರಲ್ಲಿ ಅರ್ಥ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಡಿಯೂರಪ್ಪನವರ ಮೇಲಿನ ಸಿಟ್ಟನ್ನು ರೈತರ ಮೇಲೆ ತೋರಿಸಬೇಡಿ ಅಷ್ಟೆ.

ಶ್ರೀ ವೀರೇಂದ್ರ ಪಾಟೀಲ್:- ನನಗೆ ಏಕೆ ಬೇಜಾರು ಬರುತ್ತದೆ ಎಂದರೆ, ಯಾವುದಾದರೂ ಒಂದು ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕೆ ಒಂದು ಮಿತಿಬೇಕು. ಆದರೆ ಇದಕ್ಕೆ ಇತಿಮಿತಿ ಇದ್ದಹಾಗೆ ಕಾಣುವುದಿಲ್ಲ. ಯಾವಾಗಲೂ ರೈತರ ಸಾಲ ಮನ್ನಾ. ಕೆಲವು ಸದಸ್ಯರಿಗೆ ಬಹುಶಃ ಕನಸಿನಲ್ಲೂ ರೈತರ ಸಾಲ ಮನ್ನಾ ಮಾಡಬೇಕು ಎಂದು ರಾತ್ರಿ ಮಲಗಿದ್ದಾಗಲೂ ಇದೇ ಬರುತ್ತದೆ ಏನೋ ಗೊತ್ತಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಈ ಮಾನ್ಯ ಸದನದಲ್ಲಿ ಅನೇಕ ಗಹನವಾದ ವಿಚಾರಗಳು, ಗಹನವಾದ ಚರ್ಚೆಗಳು, ಬಿಸಿನೆಸ್ ಟ್ರಾನ್ಸಾಕ್ಟ್ ಮಾಡುವುದಕ್ಕೆ ನಾವೆಲ್ಲ ಸೇರಿರುತ್ತೇವೆ. ನಾವು ಎಷ್ಟು ಸಲ ಇದನ್ನೇ ಚರ್ಚೆ ಮಾಡಬೇಕು? ಅದನ್ನಾದರೂ ಹೇಳಿ. ಮೊದಲನೇ ದಿವಸ ಇನ್ನೂ ಕಾರ್ಯಕಲಾಪಗಳು ಶುರುವಾಗಲಿಲ್ಲ, ಪ್ರಮಾಣ ವಚನ ಸ್ವೀಕಾರ ಮಾಡಿದ ತಕ್ಷಣ ರೈತರ ಸಾಲ ಮನ್ನಾ ಮಾಡಬೇಕು ಎಂದು ಧರಣಿ ಶುರುವಾಯಿತು. ಬಹಶಃ ಇದರ ಇತಿಹಾಸ ಆರೀತಿಯಿಂದ ಪ್ರಾರಂಭವಾಯಿತು. ಮೊದಲು ಕೆಲವು ದಿವಸಗಳವರೆಗೆ ನಾನು ಒಂದು ಧೋರಣೆಯನ್ನು ತಾಳಿದೆ. ಏಕೆಂದರೆ ಆತ ರೈತರ ಸಾಲ ಮನ್ನಾಮಾಡಬೇಕು ಎಂದು ಗೊತ್ತಿರಲಿಲ್ಲ. ಎಲ್ಲರ ವಿಚಾರ ಏನು ಇತ್ತು ಎಂದರೆ, ನ್ಯಾಷನಲ್ ಫ್ರಂಟ್‌ದ ಪ್ರಣಾಳಿಕೆಯಲ್ಲಿ 2-10-89 ಕ್ಕೆ ಏನು ರೈತರ ಸಾಲ ಇರುತ್ತದೆ ಅದು ಮನ್ನಾ ಆಗಬೇಕೆಂಬುದು ಅವರ ಕಮಿಟ್‌ಮೆಂಟ್. ಅದು ಸಾಲ ಮನ್ನಾ ಆಗಬೇಕು, ಸಾಲ ಮನ್ನಾ ಆಗಬೇಕು ಎಂದು ಹೇಳುತ್ತಾ ಇದ್ದರು. ಆಗ ನಾನು 'ಹೌದಪ್ಪ, ಇದು ನಮ್ಮ ಕಮಿಟ್‌ಮೆಂಟ್ ಅಲ್ಲ, ಗವರ್ನಮೆಂಟ್ ಆಫ್ ಇಂಡಿಯಾದ ಕಮಿಟ್‌ಮೆಂಟ್ ಇದೆ, ಪ್ರಯತ್ನ ಮಾಡೋಣ' ಎಂದು ಹೇಳುತ್ತಿದ್ದೆ ಆದರೆ ಆ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರು 'ಇಲ್ಲ ಅದು ನೀವೇ ಸಾಲ ಮನ್ನಾ ಮಾಡಬೇಕು, ಕೇಂದ್ರ ಸರ್ಕಾರ ಅಲ್ಲ, ನೀವೇ ಮನ್ನಾ ಮಾಡಬೇಕು' ಎಂದು ಶುರುಮಾಡಿದರು. ಆಗ ನಾನು 'ಇದರ ಸಲುವಾಗಿ ದೆಹಲಿಗೆ ಹೋಗುತ್ತೇನೆ, ಭೇಟ್ಟಿಯಾಗುತ್ತೇನೆ, ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡುತ್ತೇನೆ, ಹಣಕಾಸಿನ ಮಂತ್ರಿಗಳನ್ನು ಭೇಟ್ಟಿಯಾಗುತ್ತೇನೆ ಮತ್ತು ಪ್ರಧಾನ ಮಂತ್ರಿಗಳನ್ನು ಭೇಟ್ಟಿಯಾಗುತ್ತೇನೆ, ಅವರು ಇವತ್ತು ಏನು ಕಮಿಟ್‌ಮೆಂಟ್ ಕೊಟ್ಟಿದ್ದಾರೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಒತ್ತಾಯ ಮಾಡುತ್ತೇನೆ ಎಂದು ಹೇಳಿದೆ. ಅದೆಲ್ಲ ಪ್ರಯತ್ನ ಮಾಡಿದೆ. ಆದರೆ ಏನೂ ಆಗಲಿಲ್ಲ. ಕೊನೆಗೆ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ತಯಾರು ಮಾಡಿದರು. ಆ ಯೋಜನೆ ಬಗ್ಗೆ ಈ ಮನೆಯಲ್ಲಿ ಚರ್ಚೆ ಆಯಿತು. ಬಹುಶಃ ಶ್ರೀ ಯಡಿಯೂರಪ್ಪ ಒಬ್ಬರನ್ನು ಬಿಟ್ಟರೆ, ಆ ಕಡೆ ಈ ಕಡೆಯಲ್ಲಿದ್ದಂಥ ಎಲ್ಲ ಸದಸ್ಯರು ಕೇಂದ್ರಸರ್ಕಾರದ ಯೋಜನೆಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿದರು. ಆ ಯೋಜನೆ ಏನು

ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಮುಚ್ಚುಮರೆ ಇಟ್ಟು ನಾನು ಹೇಳಿಲ್ಲ. ಆ ಸ್ಕೀಮನ್ನು ನಾನು ಸೈಕ್ಲೋಸ್ಟೈಲ್ ಮಾಡಿಸಿ ಪ್ರತಿಯೊಬ್ಬ ಸದಸ್ಯರಿಗೆ ಕೊಟ್ಟೆ. ಬಹುಶಃ ಜನತಾದಳದ ಎಲ್ಲ ಸದಸ್ಯರೂ, ಇಲ್ಲ ಕೇಂದ್ರಸರ್ಕಾರದ ಯೋಜನೆ ಏನಿದೆ ಅದನ್ನು ನಾವು ಒಪ್ಪಿಕೊಳ್ಳಬೇಕು ಎಂದರು. ಬಹುಶಃ ಯಡಿಯೂರಪ್ಪನವರು, ನನಗೆ ಗೊತ್ತಿದೆಯಲ್ಲ. ಅವರು ಕೊನೆವರೆಗೂ ಒಪ್ಪುವುದಿಲ್ಲ. ಅದು ಸ್ವಾಭಾವಿಕ ಅದನ್ನು ನಾನೇನೂ ಲೆಕ್ಕಕ್ಕೇ ತೆಗೆದುಕೊಂಡಿಲ್ಲ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಮಾತನ್ನು ನಾನು ಸಭಾನಾಯಕರಿಂದ ನಿರೀಕ್ಷೆ ಮಾಡಿರಲಿಲ್ಲ. ಯಡಿಯೂರಪ್ಪ ಒಂದು ಅಖಿಲಭಾರತ ಮಟ್ಟದ ಪಕ್ಷದಲ್ಲಿದ್ದಾನೆ .....

ಶ್ರೀ ವೀರೇಂದ್ರ ಪಾಟೀಲ್:- ನಾನು ಯಿಲ್ಡ್ ಆಗಿಲ್ಲ. ಆಗ ಎಲ್ಲರೂ ಒಪ್ಪಿ ಕೊಂಡರು. ಆನಂತರ ನಾನು ಹೇಳಿದೆ, ಇದರಲ್ಲಿ 50 ಪರ್ಸ್ಂಟ್ ನಾನು ಕೊಡಬೇಕಾಗುತ್ತದೆ. ಇದು ಬಹುಶಃ ನೂರು ಕೋಟಿ ಆಗುತ್ತದೋ, 120 ಕೋಟಿ ಆಗುತ್ತದೋ, ಆ ದುಡ್ಡು ನನ್ನ ಹತ್ತಿರ ಇಲ್ಲ. ಪ್ಲಾನ್‌ನಲ್ಲಿ ನಾವು ಒದಗಿಸಿಲ್ಲ, ನಮ್ಮ ಹತ್ತಿರ ಸಾಲ ಬಹಳ ಇದೆ, ಕಷ್ಟದ ಪರಿಸ್ಥಿತಿ ಇದೆ ಎಂದು ಹೇಳಿದೆ. ಆಗ ಎಲ್ಲರೂ ಹೇಳಿದರು 'ಇಲ್ಲ ರೈತರ ಸಲುವಾಗಿ ಈ ಒಂದು ತ್ಯಾಗ ಮಾಡಬೇಕು, ರೈತರ ಸಲುವಾಗಿ ನೀವು ಇದನ್ನು ಒಪ್ಪಿಕೊಳ್ಳಬೇಕು; ಆರ್ಧ ನೀವು ಕೊಟ್ಟು 50 ಪರ್ಸ್ಂಟ್ ಕೇಂದ್ರಸರ್ಕಾರ ಏನು ಯೋಜನೆ ಹಾಕಿದ್ದಾರೆ, ಅದನ್ನು ಒಪ್ಪಿಕೊಳ್ಳಬೇಕು' ಎಂದು ಹೇಳಿದರು. ಇದಾದಮೇಲೆ ಕಮಿಟ್‌ಮೆಂಟ್ ಇಲ್ಲ. ನಾನು ಯಾವುದೂ ರೈತರ ಸಾಲ ಮನ್ನಾ ಮಾಡುತ್ತೇವೆಂದು ಭರವಸೆ ಕೊಟ್ಟಿಲ್ಲ, ರೈತರಿಗೆ ಈ ರೀತಿಯಾಗಿ ವಚನ ಕೊಟ್ಟು, ಓಟು ತೆಗೆದುಕೊಂಡಿಲ್ಲ. ಅದರಲ್ಲೂ ರೈತರ ಪ್ರತಿನಿಧಿಯಾಗಿ ಅನೇಕ ಜನ ಬಂದಿದ್ದೇವೆ ಎನ್ನುವುದನ್ನೂ ಒಪ್ಪುತ್ತೇನೆ. 50 ಪರ್ಸ್ಂಟ್ ನಾನು ಕೊಡುತ್ತೇನೆ ಎನ್ನುವುದನ್ನು ಒಪ್ಪಿ ಕೇಂದ್ರ ಸರ್ಕಾರಕ್ಕೆ ನಾನು ಇಷ್ಟೇ ಹೇಳಿದ್ದೇನೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ಈ ವಿಷಯ ಬಂದಾಗ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದು ನಮ್ಮ ಕಮಿಟ್‌ಮೆಂಟ್ ಅಲ್ಲ. ನೀವೇನಾದರೂ ಸ್ವಲ್ಪ ಅನುಕೂಲತೆ ಮಾಡಿಕೊಟ್ಟರೆ, ನಾವು ಒಪ್ಪುತ್ತೇವೆಂದು ಹೇಳಿದ್ದೇನೆ. ನನ್ನ ಹತ್ತಿರ ಮಾನ್ಯ ಹಣಕಾಸಿನ ಮಂತ್ರಿಗಳ ಪತ್ರಗಳು ಇವೆ It is not your commitment but it is the commitment of my party. ಎನ್ನುವಂಥ ಪತ್ರವನ್ನು ಲಿಖಿತ ಮೂಲಕ ಬರೆದಿದ್ದಾರೆ, ಇವೆಲ್ಲವನ್ನೂ ನಾನು ಓದಿ ಹೇಳಿದ್ದೇನೆ. ಇದಾದಮೇಲೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ಅವರೇ ಸ್ವತಃ ಹೇಳಿದರು. ಪಾಟೀಲರೇ ನಾನು ಒಪ್ಪುತ್ತೇನೆ, ಇದು ನಿಮ್ಮ ಕಮಿಟ್‌ಮೆಂಟ್ ಅಲ್ಲ, ನೀವು ಒಪ್ಪಿದರೆ ಏನಾದರೂ ಸ್ವಲ್ಪ ಅನುಕೂಲ ಮಾಡಿಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟರು. ಇದೆಲ್ಲಾ ಅಲ್ಲಿ ರೆಕಾರ್ಡ್‌ನಲ್ಲಿದೆ. ಇದಾದಮೇಲೆ ಏನೂ ಒಂದು ಅನುಕೂಲ ಮಾಡಿಕೊಡತ್ತೇವೆಂದು ಹೇಳಿದಂತೆ ಕಾಣಿಸುತ್ತದೆ. ಆದಕ್ಕಾಗಿ ಇಡೀ ನಮ್ಮ ರಾಷ್ಟ್ರದಲ್ಲಿ ಎಲ್ಲಾ ರಾಜ್ಯಗಳಲ್ಲೂ, ಕೇಂದ್ರ ಸರ್ಕಾರದವರು ಏನು ಯೋಜನೆ ಮಾಡಿದ್ದಾರೆ ಅದನ್ನು ಒಪ್ಪಬೇಕೆಂದು ನಿರ್ಣಯಮಾಡಿದ್ದಾರೆ,

Let me also join the main stream. ಎನ್ನುವಂಥ ಮಾತನ್ನು ಹೇಳಿ ಒಪ್ಪಿ ಬಂದಿದ್ದೇವೆ. ಮೊದಲು ಏನು ಸ್ಕೀಮ್ ಇತ್ತು ಅಂದರೆ, ಅವರು ಏನು 50 ಪರ್ಸೆಂಟ್ ಕೊಡುತ್ತಾರೆ, ಆದನ್ನು ರಿಸರ್ವ್ ಬ್ಯಾಂಕನವರು ಅಡ್ವಾನ್ಸ್ ಕೊಡುತ್ತಾರೆ, ಅದನ್ನು ಎರಡು ವರ್ಷದಲ್ಲಿ ಕಟ್ಟಬೇಕು ಎನ್ನುವುದು ಅವರ ಸ್ಕೀಮ್. ಇದನ್ನು ನೀವು ಸ್ವಲ್ಪ ತಿಳಿದುಕೊಳ್ಳಬೇಕು, ತಿಳಿದು ಕೊಳ್ಳದೆ ಮಾತನಾಡುವುದರಲ್ಲಿ ಅರ್ಥ ಇಲ್ಲ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ಆ ರೀತಿ ಹೇಳಿದ ಮೇಲೆ, ಅವರು ಆನಂತರ ಬರೆದರು. ನೀವು ಏನು ಎನ್.ಡಿ.ಸಿ. ಸಭೆಯಲ್ಲಿ ಹೇಳಿದ್ದೀರಿ ಅದನ್ನು ಪರಿಶೀಲನೆ ಮಾಡಿ, 2 ಕಂತಿನಲ್ಲಿ ಕಟ್ಟಬೇಡಿ, ಮೂರು ಕಂತಿನಲ್ಲಿ ಕಟ್ಟಿ 10 ಪರ್ಸೆಂಟ್ ಮಾತ್ರ ರಿಯಾಯಿತಿ ಬಡ್ಡಿ ಕೊಡುತ್ತೇವೆ ಎಂದು ಬರೆದರು. ಈ ಸ್ಕೀಮ್ ಮಾಡಿ ಅವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಇಷ್ಟು ದಿವಸದೊಳಗಾಗಿ, Whether the scheme is acceptable to you or not? ಎನ್ನುವುದನ್ನು ನೀವುಹೇಳಬೇಕು ಎಂದು ಕಟ್ಟಪ್ಪಣೆ ಹಾಕಿದರೂ. ಮಾನ್ಯ ಯಡಿಯೂರಪ್ಪನವರಿಗೆ ಏನೇನು ನಡೆಯುತ್ತಿದೆ ಎಂಬುದು ಗೊತ್ತಿಲ್ಲ. ಅವರು ಏನೇನೋ ಹೇಳುತ್ತಿದ್ದಾರೆ ಮತ್ತು . ನಮ್ಮ

ಪ್ರತಿಯೊಂದು ಮಾತಿನ ಬಗ್ಗೆಯೂ ನಾನು ಹೇಳಬೇಕೆಂದರೆ ಬಹಳ ಕಷ್ಟವಾಗುತ್ತದೆ. ಇದಾದ ಮೇಲೆ ಅವರು Please let us know, whether you are going to accept the scheme or not ಎಂದು ಹೇಳಿದರು. ಅಲ್ಲದೆ ಅಲ್ಲಿ ಮೀಟಿಂಗ್ ಇಟ್ಟು ನಿಮ್ಮ ಆಫೀಸ್‌ರಿಗೆ ಆಥರೈಸ್ ಮಾಡಿ ಸಭೆಗೆ ಕಳುಹಿಸಿಕೊಡಬೇಕು ಹಾಗೂ ನಿಮಗೆ ತಿಳಿಸಬೇಕೆಂದು ಹೇಳಿದರು. ಆಗ ನಾನು ನಮ್ಮ ಆಫೀಸರಿಗೆ ಹೇಳಿದೆ I am accepting the scheme. ಸ್ಕೀಮ್ ಆಕ್ಸೆಪ್ಟ್ ಮಾಡಿದ್ದೇವೆ, ಈ ಸ್ಕೀಮ್ ಪ್ರಕಾರ ರೈತರ ಸಾಲ ಮನ್ನಾ ಆಗುತ್ತದೆ. ಅವರಿಗೆ ಒಂದು ನಯಾಪೈಸೆಯನ್ನೂ ಕೇಳುವಹಾಗಿಲ್ಲ, ವಸೂಲ್ಮಾಡುವಹಾಗಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಆಗ, ಈ ಮನೆಯಲ್ಲೋ ಮೇಲ್ಮನೆಯಲ್ಲೋ ಕೇಳಿದರು. ಆಗ ನಾನು ಹೇಳಿದೆ ಆ ಸ್ಕೀಮ್ ಒಪ್ಪಿದ್ದೇನೆ, ಎಷ್ಟು ಕಂತಿನಲ್ಲಿ ತಿರುಗಿ ಕೊಡಬೇಕು, ಬಡ್ಡಿ ಕಟ್ಟಬೇಕೋ ಆಥವಾ ಇಲ್ಲವೋ ಎನ್ನುವುದು, It is only between the State Government and the Central Government. So far as farmers are concerned, they are going to be benefited by this scheme. ಎಂದು ಮೂರ್ತಿ ಕ್ಲೀನಾಗಿ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇದಾದ ಮೇಲೆ ಮತ್ತೆ ನಾನು ಅವರಿಗೆ ಪತ್ರ ಬರೆದೆ ಮೂರು ಕಂತು ಎಂದು ಹೇಳಿದ್ದೀರಿ, ಇದು ಬಹಳ ಕಷ್ಟವಾಗುತ್ತದೆ, ಇದು ಆಗುವಹಾಗಿಲ್ಲ. ಆದ್ದರಿಂದ ಕನಿಷ್ಟ ಮೂರು ವರ್ಷ ಮೊರೆಟೋರಿಯಂ ಕೊಡಿ, 4 ವರ್ಷದ ನಂತರ ಕಟ್ಟುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಆ ಸಭೆಗೆ ನಮ್ಮ ಆಫೀಸ್‌ರನ್ನು ಕಳುಹಿಸಿದೆ, ಅವರು, ಅಲ್ಲಿಯ ಸಭೆಗೆ ಹೋಗಿದ್ದರು, ಮೀಟಿಂಗ್‌ನಲ್ಲಿ ಚರ್ಚೆಯಾದ ಮೇಲೆ, ಅವರು ಹೇಳಿದರಂತೆ ಇಲ್ಲ, ನಾವು ಏನು ಸ್ಕೀಮ್ ಮಾಡಿದ್ದೇವೆ, ಅದರಲ್ಲಿ ಯಾವುದೇ ರೀತಿಯ ಮಾರ್ಪಾಡು ಮಾಡುವುದಕ್ಕೆ ತಯಾರಿಲ್ಲ. ನೀವು ಏನು 50 ಪರ್ಸೆಂಟ್ ತೆಗೆದುಕೊಳ್ಳುತ್ತೀರಿ, ಅದನ್ನು ಮೂರು ಕಂತಿನಲ್ಲಿ ಕಟ್ಟಬೇಕೆಂದು ಹೇಳಿದರಂತೆ. ಮುಂದಿನ ತಿಂಗಳ 5ನೇ ತಾರೀಖು ನ್ಯಾಷನಲ್ ಡೆವಲಪಮೆಂಟ್ ಕೌನ್ಸಿಲ್ ಮೀಟಿಂಗ್ ಇದೆ, ಅಲ್ಲಿ ನಾವು ಒತ್ತಾಯ ಮಾಡುತ್ತೇವೆ. ಇದು ನಾನೊಬ್ಬನೇ ಅಲ್ಲ, ವೆಸ್ಟ್ ಬೆಂಗಾಲ್ ಮುಖ್ಯ ಮಂತ್ರಿಗಳು, ಇದೇ ರೀತಿ ರಾಜಾಸ್ತಾನ್ ಮುಖ್ಯಮಂತ್ರಿಗಳು, ಗುಜರಾತ್ ಮುಖ್ಯಮಂತ್ರಿಗಳು ಮತ್ತು ಹಿಮಾಚಲ ಮುಖ್ಯಮಂತ್ರಿಗಳು ಎಲ್ಲರೂ, ನಾನು ಏನು ಹೇಳಿದ್ದೇನೆ, ಮೂರು ವರ್ಷ ಮೊರೆಟೋರಿಯಂ ಕೊಡಬೇಕು, 4 ವರ್ಷದಲ್ಲಿ ಕಂತು ಕಟ್ಟುವುದಕ್ಕೆ ಆಂದರೆ ಒಟ್ಟು 7 ವರ್ಷ ಅವಕಾಶವನ್ನು ರಿಸರ್ವ್ ಬ್ಯಾಂಕ್‌ಗೆ ಕೇಳಿರುವುದು, ಇದನ್ನು ನಾನೊಬ್ಬನೇ ಕೇಳಿಲ್ಲ, ಎಲ್ಲಾ ರಾಜ್ಯಗಳವರೂ ಕೇಳಿದ್ದಾರೆ. ಬಹುಶಃ ರಾಜಾಸ್ಥಾನದಲ್ಲಿ ಬಿ.ಜೆ.ಪಿ. ಸರಕಾರ ಇದೆ ಮಾನ್ಯ 10.35 ಎ.ಎಂ

ಯಡಿಯೂರಪ್ಪನವರಿಗೆ ಹೇಳಬೇಕೋ ಏನೋ ಗೊತ್ತಿಲ್ಲ. ರಾಜಾಸ್ಥಾನದಲ್ಲಿ ಬಿ.ಜೆ.ಪಿ. ಸರಕಾರ ಇದೆ. ಅದೇ ರೀತಿ ಹಿಮಾಚಲಪ್ರದೇಶದಲ್ಲಿ ಇದೆ. ಇದು ಆದಮೇಲೆ ಇನ್ನೂ ಸ್ವಲ್ಪ ತಕರಾರು ಇದೆ. ಈ ತಕರಾರು ಸ್ಕೀಮ್ ಬಗ್ಗೆ ಅಲ್ಲ. ತಕರಾರು ಇರುವಂತಹದು ನಾವು ರಾಜ್ಯ ಸರಕಾರದವರು 50 ಪರ್ಸೆಂಟ್ ದುಡ್ಡು ತುಂಬ ಬೇಕಾಗಿದೆ, ಇದಕ್ಕೆ ರಿಸರ್ವ್ ಬ್ಯಾಂಕ್‌ನವರು ಆಡ್ವಾನ್ಸ್ ಕೊಡುವುದಕ್ಕೆ ತಯಾರಾಗಿದ್ದಾರೆ ರಿಸರ್ವ್ ಬ್ಯಾಂಕ್‌ಗೆ ಇನಸ್ಟ್ರಕ್ಷನ್ಸ್ ಹೋಗಿದೆ, ರಿಸರ್ವ್ ಬ್ಯಾಂಕ್‌ನವರು ಆಡ್ವಾನ್ಸ್ ಕೊಡುತ್ತಿದ್ದಾರೆ. ಯಾವ ಸ್ಕೀಮ್ ಪ್ರಕಾರ ಯಾವ ರೈತರ ಸಾಲ ಮನ್ನಾ ಮಾಡಬೇಕಾಗಿದೆ, ಆ ಸಾಲ ಮನ್ನಾ ಆಗಿಹೋಗುತ್ತದೆ. ಬೆನಿಫಿಷಿಯರೀಸ್ ಯಾರು ಯಾರು ಏನೇನು ಎಂಬ ಪಟ್ಟಿ ತಯಾರಾಗುತ್ತಿದೆ. ಅದರ ಪ್ರಕಾರ ಅನುಕೂಲ ಆಗಿಹೋಗುತ್ತದೆ. ಇನ್ನು ಬಂದಿರುವುದು ಮೂರು ಕಂತಿನಲ್ಲಿ ಕೊಡಬೇಕೋ ಆಥವಾ 7 ಕಂತಿನಲ್ಲಿ ಕೊಡಬೇಕೋ ಎಂಬ ಪ್ರಶ್ನೆ. ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ಮುಂದೆ ಇಷ್ಟೇ ಪ್ರಶ್ನೆ ಇದೆ. ಮತ್ತೆ ಯಾವುದೂ ಪ್ರಶ್ನೆ ಇಲ್ಲ. ಸ್ಕೀಮ್ ಬಗ್ಗೆ ಯಾವ ತರಹದ ತಕರಾರೂ ಇಲ್ಲ. ನಾನು ಸ್ಪಷ್ಟವಾಗಿ ಅಧಿಕಾರ ವಾಣಿಯಿಂದ ಹೇಳುತ್ತಿದ್ದೇನೆ. ಈ ಮಧ್ಯೆ ಕೇರಳದ ಮುಖ್ಯಮಂತ್ರಿಗಳು ಆ 50 ಪರ್ಸೆಂಟೂ ನಿಮ್ಮಿಂದ ಬರಬೇಕು, ನಾವು ಒಂದು ನಯಾಪೈಸೆ ಕೊಡುವುದಕ್ಕೆ ತಯಾರಾಗಿಲ್ಲ ಎಂದು ಹೇಳಿದ್ದಾರೆ. Even today that is the stand

the Kerala Government. ಅವರು ಇದು ನಮ್ಮ ಕಮಿಟ್‌ಮೆಂಟ್ ಅಲ್ಲ ಎಂದು ಳುತ್ತಾರೆ. ವೆಸ್ಟ್ ಬೆಂಗಾಲದಲ್ಲೂ ಸಿ.ಪಿ.ಎಂ. ಗೌರ್ನಮೆಂಟ್ ಇದೆ. ಅವರು ಸ್ಕೀಮ್ ್ಕೊಳ್ಳುತ್ತಾರೆ, ಆದರೆ ಈಸಿ ಇನ್‌ಸ್ಟಾಲ್‌ಮೆಂಟ್ಸ್ ಮಾಡಬೇಕೆಂದು ಹೇಳುತ್ತಾರೆ. ಕೇರಳ ್ನಮೆಂಟ್ ಸ್ಕೀಮ್ ಒಪ್ಪಿ ಕೊಳ್ಳುತ್ತಾರೆ, ಆದರೆ 50 ಪರ್ಸೆಂಟೂ ಸಹ ನೀವೇ ಕೊಡಬೇಕು, ನಾವು ಸುವುದಕ್ಕೆ ತಯಾರಾಗಿಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆ. ಬಹುಶಃ ಅವರೂ ನಮ್ಮ ತೆಯಲ್ಲಿ ಬರುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಪರಿಸ್ಥಿತಿ ಹೀಗಿರುವುದರಿಂದ ಸ್ಕೀಮ್ ಕೆಳಗೆ ಎ ರೈತರುಗಳ ಸಾಲ ಮನ್ನಾ ಆಗುತ್ತದೆ, ಆಗಲಿ. ಅದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಆದರೆ ಾವರಣ ಏನಿದೆ, ಏನು ಕಲ್ಪನೆ ಮಾಡುತ್ತಿದ್ದಾರೆ ಎಂದರೆ, ರೈತರ ಸಾಲ ಮನ್ನಾ ಮಾಡುವುದಕ್ಕೆ, ಸರಕಾರ ತಯಾರಾಗಿಲ್ಲ ಎಂದು ಹೇಳುತ್ತಿದ್ದಾರೆ. ರೈತರ ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರ ಾರದವರು ಏನು ಒಂದು ನೀತಿ ಹಾಕಿದ್ದಾರೆ, ಯೋಜನೆ ಹಾಕಿದ್ದಾರೆ ಆ ಯೋಜನೆಯನ್ನು ಿಲ್ಲರೂ ಒಪ್ಪಿಕೊಂಡಿದ್ದೇವೆ. ಅಷ್ಟೇ ಅಲ್ಲ, ಈ ಯೋಜನೆಯನ್ನು ಗುಜರಾತ್, ರಾಜಸ್ಥಾನ್, ಾಚಲಪ್ರದೇಶ, ಬಿಹಾರ ರಾಜ್ಯಗಳವರು ಒಪ್ಪಿಕೊಂಡಿದ್ದಾರೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮುಖ್ಯಮಂತ್ರಿಗಳೇ, ಒಂದು ಷ ದೊಡ್ಡ ಮನಸ್ಸು ಮಾಡಿ ಈಲ್ಡ್ ಆಗಿ. ಸಾಲ ಮನ್ನಾ ಮಾಡುವುದಕ್ಕೆ ನಿಮಗೆ ಆಸಕ್ತಿ ಇಲ್ಲ, ಮುಂದೆ ಹೋಗುತ್ತಿಲ್ಲ ಎಂದು ನಾನು ಹೇಳಲಿಲ್ಲ. ಈಗ ತಾವು ಕೇಂದ್ರ ಸರಕಾರದ ಸ್ಕೀಮ್ ೊಂಡಿದ್ದೀರಿ. ಈ ನಿಲುವಳಿ ಸೂಚನೆಯ ವಿಷಯ ಏನೆಂದರೆ, ನೀವು ಏನು ಒಪ್ಪಿಕೊಂಡಿದ್ದೀರಿ ಂದ ಈ ರಾಜ್ಯದ ರೈತನಿಗೆ ಅನುಕೂಲವಾಗುವುದಿಲ್ಲ. ಇದು ಒಂದು. ಎರಡನೆಯದು, ತಾವು , ಹೃದಯ ಮುಟ್ಟಿ ಹೇಳಿ, ಈ ಯೋಜನೆಯಿಂದ ನಮ್ಮ ರಾಜ್ಯ ಸರಕಾರಕ್ಕೆ 50 ಕೋಟಿ ಾಯಿ ಭಾರ ಸಹಿತ ಬೀಳುವುದಿಲ್ಲ. ನಾನು ಏನು ಸಲಹೆ ಕೊಡುತ್ತಿದ್ದೇನೆ ಎಂದರೆ, ಎಲ್ಲರ ು ನಿಯೋಗವನ್ನು ಕೇಂದ್ರ ಸರಕಾರಕ್ಕೆ ತೆಗೆದುಕೊಂಡು ಹೋಗಿ ನಮ್ಮ ರಾಜ್ಯದ ರೈತನ ತಿಯ ಅರಿವನ್ನು ಅವರಿಗೆ ಮೂಡಿಸಿ ನಮಗೆ ಅನುಕೂಲವಾಗುವ ಯೋಜನೆ ತರುತ್ತೇವೆ, ು ಮಾಡಿ ಎಂದು ಕೇಳೋಣ. ಮೂರನೆಯದು, ನಿಮಗೆ ಮನದಟ್ಟಾಗುವ ದೃಷ್ಟಿಯಿಂದ ಈ ನ ಒಂದು ಸಮಿತಿ ಮಾಡಿ. ನಾವು ಹೋಗಿ ನೋಡಿಕೊಂಡು ಬರುತ್ತೇವೆ. ನಿಮ್ಮ ಪಕ್ಷದ ರೇ ಜಾಸ್ತಿ ಇರಲಿ. ರೈತನ ಪರಿಸ್ಥಿತಿ ಸರಿಯಿಲ್ಲ, ಮನ್ನಾ ಮಾಡುವ ಅಗತ್ಯ ಇದೆ ಎಂದು ರೆ, ತಾವು ಧಾರಾಳತನದಿಂದ ಮಾಡಿ. ಅಲ್ಲಿಯವರೆಗೆ ಸಾಲ ವಸೂಲಾತಿಯನ್ನು ನಿಲ್ಲಿಸಿ. ಗೊತ್ತಿರಬಹುದು, ಮಧ್ಯಪ್ರದೇಶ ಸರಕಾರದವರು 480 ಕೋಟಿ ರೂಪಾಯಿಗಳ ಯೋಜನೆ ು ಮಾಡಿ, ಬಜೆಟ್‌ನಲ್ಲಿ 370 ಕೋಟಿ ರೂಪಾಯಿ ಅಲೋಕೇಷನ್ ಇಟ್ಟಿದ್ದಾರೆ. ಅಲ್ಲೇನೂ ್ ಪ್ರಿಂಟ್ ಮಾಡುತ್ತಾರೆಯೇ ಸ್ವಾಮಿ ? ಅದಕ್ಕೋಸ್ಕರ ನೀವೂ ಈ ಯೋಜನೆ ಜಾರಿಗೆ ಯಾವುದೇ ಕಂಡೀಷನ್ ಇಟ್ಟುಕೊಳ್ಳದೇ ಮಾಡಿದರೂ ನೂರು ಕೋಟಿ ರೂಪಾಯಿ ಭಾರ ಮೇಲೆ ಬೀಳುವುದಿಲ್ಲ. ನೀವು 200 ಕೋಟಿ ರೂಪಾಯಿ ಯೋಜನೆಗೆ ಒಪ್ಪಿಕೊಳ್ಳಿ, ನಾವು ಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರದಿಂದ ಕೊಡಿಸುತ್ತೇವೆ. ಆಗ ನೀವು ಈ ಿಲ್ಲಿರುವಂತಹ ಎಲ್ಲಾ ರೈತರ 10 ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾಮಾಡುವುದಕ್ಕೆ ೋ ಇಲ್ಲವೋ ನೋಡಿ. ಅದಕ್ಕೆ ನಾನು ಹೇಳುತ್ತಿರುವುದು. ತಾವು ಆ ವೃತ್ತಿನಿಂದ ಆದೇ ದ್ದೀರಿ. ನೀವು ಹೊಸದಾಗಿ ಹೇಳುತ್ತಿರುವುದು ಏನು? ಕೇಂದ್ರ ಸರಕಾರದವರು ರಿಶೀಲನೆ ಯಾವಾಗ ಮಾಡುತ್ತಾರೆ ಸ್ವಾಮಿ ? ನಿಮ್ಮಂತಹ ರಾಜ್ಯದ ಮುಖ್ಯ ಮಂತ್ರಿಗಳು ್ಗಳು, ಈ ರಾಜ್ಯದ ರೈತನ ಪರಿಸ್ಥಿತಿ ಬಗ್ಗೆ ಕೇಂದ್ರ ಸರಕಾರದ ಮನಸ್ಸನ್ನು ಒಲಿಸಿ, ರೈತನ ುನ್ನು ತಿಳಿಸಿದಾಗ ಮಾತ್ರ ತಾನೇ ? ಆ ಪ್ರಯತ್ನ ತಮ್ಮಿಂದ ಆಗಿದೆಯೇ ಸ್ವಾಮಿ? ್ ತಾವು ಕರೆದುಕೊಂಡು ಹೋದರಾ? ಹೇಳಿದ್ದೀರಾ? ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಈ ಯೋಜನೆಗೆ ಹಣ ಕೊಡುವುದಕ್ಕೆ ಆಗುತ್ತಿಲ್ಲ. ಹಣ ಬೇಕೆಂದು ಕೇಳುತ್ತಿದ್ದೀರೆಯೇ , ಕೇಂದ್ರ ಸರಕಾರವನ್ನು 10-20 ಪರ್ಸೆಂಟ್ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೀರೇ

ಹೊರತು, ನಮ್ಮ ರಾಜ್ಯದ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ರೀತಿ ಯೋಜನೆ ಹಾಕಬೇಕೆಂ ತಾವು ಹೇಳಿಲ್ಲ. ದಯವಿಟ್ಟು ಅದನ್ನು ಹೇಳಿ ಎಂದು ನಾನು ಹೇಳುವುದು. ಅದು ಆಗಲಿಲ್ಲ ಎಂ ಸಾಲ ವಸೂಲಾತಿ ಮಾಡುವಿರಂತೆ. ಯಾರು ಬೇಡ ಎನ್ನುತ್ತಾರೆ? ರೈತ ಏನು ಮಾಡುವು ಆಗುತ್ತದೆ? ಅಲ್ಲಿಯವರೆಗೆ ಸಾಲ ವಸೂಲಾತಿಗೆ ತಡೆಯಾಜ್ಞೆ ಮಾಡಿ. ಸದನದ ಸಮಿತಿ ಮಾ ವಿರೋಧಪಕ್ಷದ ನಾಯಕರ ಹಾಗೂ ತಮ್ಮ ನೇತೃತ್ವದಲ್ಲಿ ನಾವು ಬರುತ್ತೇವೆ. ಕೇಂದ್ರ ಸರಕ ಒಪ್ಪಿಕೊಂಡರೆ ರೈತನನ್ನು ಋಣಮುಕ್ತನನ್ನಾಗಿ ಮಾಡಬಹುದಲ್ಲ. ನಾನು ಬೆಳಿಗ್ಗೆಯಿಂ ನೋಡುತ್ತಿದ್ದೇನೆ. ತಾವು ಯಾವುದೋ ಸಿಟ್ಟಿನಲ್ಲಿ ಬಂದಿದ್ದೀರಿ. ಅದು ನಮ್ಮ ಗ್ರಹಚಾರವೋ ಯಡಿಯೂರಪ್ಪನ ಗ್ರಹಚಾರವೋ, ಈ ರಾಜ್ಯದ ರೈತನ ಗ್ರಹಚಾರವೋ ಗೊತ್ತಿಲ್ಲ. ಯಾವುದೆ ಸಿಟ್ಟಿನಲ್ಲಿ ತಾವು ಬಂದಿದ್ದೀರಿ. ತಾವು ಒಂದು ಮಾತು ಹೇಳಿದಿರಿ. ನಾನು ಯಡಿಯೂರಪ್ಪನವರನ ಲೆಕ್ಕಕ್ಕೆ ತೆಗೆದು ಕೊಳ್ಳುವುದಿಲ್ಲ ಎಂದು ಹೇಳಿದಿರಿ. ತಾವು ದೊಡ್ಡವರು, ಆ ಮಾತು ಹೇಳಿ ತಾ ಯಡಿಯೂರಪ್ಪನನ್ನು ಮನಸ್ಸಿಗೆ ತೆಗೆದುಕೊಳ್ಳದೇ ಇದ್ದರೂ ಸಹಿತ, ಈ ರಾಜ್ಯದ ರೈತ ನಿವ ಸರಕಾರವನ್ನು ಅವರ ಹೃದಯದಿಂದ ಹೊರಗಿಡುತ್ತಾನೆ. ಇದನ್ನು ಮರೆಯಬೇಡಿ. ರೈತನ ಜೊತೆ ಚೆಲ್ಲಾಟವಾಡದೇ ಧೈರ್ಯದಿಂದ ಯೋಚನೆ ಮಾಡಿ, ಧಾರಳವಾಗಿ ಯೋಚನೆ ಮಾಡಿ. ನಿವ ಸರಕಾರಕ್ಕೆ ಬಹಳ ಒಳ್ಳೆಯ ಹೆಸರು ಬರುತ್ತದೆ. ನಾವು ಇರುವುದು ನಾಲ್ಕು ಜನ. ಈ ಯೋಜ ಜಾರಿಗೆ ತಂದರೆ ಮೂರು ತಿಂಗಳಲ್ಲಿ ನಾವೇನು 140 ಜನ ಆಗುತ್ತೇವೆಯೇ? ನಾವು ಬೇಕಾದ ರೈತರ ಬಗ್ಗೆ ಮಾತನಾಡುವುದನ್ನೇ ನಿಲ್ಲಿಸಿಬಿಡುತ್ತೇವೆ. ತಾವೇ ಮುಂದೆ ನಿಂತುಕೊಂಡು ತಮ್ಮ ನೇತೃ ತೆಗೆದುಕೊಂಡು ರಾಜ್ಯದ ರೈತನಿಗೆ ನೆರವು ಕೊಡಿ. ಈ ದಿಕ್ಕಿನಲ್ಲಿ ಯೋಜನೆ ಮಾಡಬೇಕೇ ಹೊರತು ಕಳೆದ ಆರು ತಿಂಗಳಿಂದ ಹೇಳಿದ್ದು ಬಿಟ್ಟು, ಒಂದು ಶಬ್ದ ಹೊಸದಾಗಿ ಏನಾದರೂ ಹೇಳುತ್ತಿದ್ದೀರಾ ತಾವೇ ಹೇಳಿ ಒಂದು ಬೇರೆ ಏನಾದರೂ ಹೇಳುತ್ತಿದ್ದೀರಾ ತಾವು?

ಶ್ರೀ. ವೀರೇಂದ್ರಪಾಟೀಲ್:- ಮಾನ್ಯ ಯಡಿಯೂರಪ್ಪನವರಿಗೆ ಏನು ಹೇಳಬೇಕೋ ನನಗ ಅರ್ಥವಾಗುತ್ತಿಲ್ಲ. ನಾನು ಮೊದಲು ಒಂದು ನಯಾಪೈಸೆ ಕೂಡ ಕೊಡುವುದಕ್ಕೆ ಆಗುವುದಿಲ್ಲ It is not my commitment ಎಂದು ಹೇಳಿದ್ದೆ. ಆನಂತರ 50 ಪರ್ಸೆಂಟ್ ಕೊಡುವುದಕ್ಕೆ ನಾನ ಒಪ್ಪಿಕೊಂಡಿದ್ದೇನೆ, ಏತಕ್ಕೆ ತಾವು ಆ ರೀತಿ ಮಾತನಾಡುತ್ತಿದ್ದೀರಿ? ನಾನು ಮೊದಲು ಹೇಳಿದ್ದನ್ನೆ ಹೇಳುತ್ತಿದ್ದೇನೆ ಅಂದರೆ ಏನು ಅರ್ಥ? ತಾವು ಏತಕ್ಕೆ ಈ ರೀತಿ ಮಾತನಾಡುತ್ತಿದ್ದೀರಿ? ಮೊದಲನ ಸಲ ನಾನು ಹೇಳಿದ್ದು ಏನು? This is the commitment of the National Front Government. I am not bound to pay even a pai. The entire money has to come from the Government of India. ಎಂದು ಹೇಳಿರಲಿಲ್ಲವೇ? ಇವತ್ತು ನಾನು ಏನು ಹೇಳುತ್ತಿದ್ದೇನೆ 50 ಪರ್ಸೆಂಟ್‌ಗೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇನೆ. ಅದನ್ನೇ ನಾನು ಮೊದಲಿನಿಂದಲೂ ಅಂದು ಕೊಂಡು ಬಂದಿದ್ದೇನೆಯೇ? ತಾವು ಏತಕ್ಕೆ ಈ ರೀತಿ ಮಾತನಾಡುತ್ತಿದ್ದೀರೋ ನನಗೆ ಅರ್ಥವಾಗುವುದಿಲ್ಲ. ತಾವು ಏನೋ ಒಂದು ತಮ್ಮ ತಲೆಯಲ್ಲಿ ತುಂಬಿಕೊಂಡು ಬಂದು ಇಲ್ಲ ಅದನ್ನೇ ಮಾತನಾಡಿದರೆ ನಾವು ಎಷ್ಟು ಎಂದು ನಿಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುವುದು. ಮಾನ್ಯ ಅಧ್ಯಕ್ಷರೇ, ಅವರು ಏನು ಹೇಳುತ್ತಾರೆ ಎಂದರೆ, ಗೌರ್ಮೆಂಟ್ ಆಫ್ ಇಂಡಿಯಾ ಸ್ಕೀಮ್ ಅನ್ನು ನಾವೆಲ್ಲರೂ ಸೇರಿ ಮಾಡಿಫೈ ಮಾಡಿಸಬೇಕು ಎಂದು ಹೇಳುತ್ತಿದ್ದಾರೆ. ಆ ಶಕ್ತಿ ನಮ್ಮ ಹತ್ತಿರ ಇದೆಯೇ? ನಾನು ಇವತ್ತು ತಮ್ಮನ್ನು ಕೇಳುತ್ತೇನೆ, ಆ ಶಕ್ತಿ ನಿಮ್ಮ ಹತ್ತಿರ ಇದೆಯೇ? ಅವರಲ್ಲಿ ಆ ಶಕ್ತಿ ಇದಯೇ ಎಂದು ಕೇಳಿ? ನನ್ನ ಎದುರಿಗೆ ಕೇಳಿ ಅವರಲ್ಲಿ ಆ ಶಕ್ತಿ ಇದೆಯೇ ಎಂದು. ನಿಮ್ಮ ರಾಜಸ್ಥಾನ ಗೌರ್ಮೆಂಟ್ ಒಪ್ಪಿಕೊಂಡಿದೆ, ಅದೇ ರೀತಿಯಾಗಿ ಹಿಮಾಚಲ ಪ್ರದೇಶದವರು ಒಪ್ಪಿಕೊಂಡಿದ್ದಾರೆ ಗುಜರಾತ್ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅವರು ಒಂದು ಹೇಳಬಹುದು ಮಾನ್ಯ ಅಧ್ಯಕ್ಷರೇ ಒಂದೇ ಒಂದು ಅವರು ಹೇಳುವಂಥಾದ್ದು ಅದು ಮಧ್ಯ ಪ್ರದೇಶದ್ದು. ನಾನು ಮಧ್ಯ ಪ್ರದೇಶದ ಮುಖ್ಯಮಂತ್ರಿಗಳನ್ನು ಕಂಡು ಅವರ ಜೊತೆಯಲ್ಲಿ ಮಾತನಾಡಿದಾಗ ಅವರು ಹೇಳಿದರು, ಅವರು ಏನು ಹೇಳಿದರು ಎನ್ನುವುದನ್ನು

ನಾನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಅವರು ನಮಗೆ ಹೇಳಿದರು ಪಾಟೀಲರೆ, ನಾವು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ಎಂದು. ಆಗ ನಾನು ಏತಕ್ಕೆ ಎಂದು ಕೇಳಿದೆ. ಆಗ ಅವರು ಹೇಳಿದರು ಏನು ಮಾಡುವುದು ಎಲೆಕ್ಷನ್ ಕಾಲದಲ್ಲಿ ನಮ್ಮದು ಒಂದೇ ಘೋಷಣೆ ಇತ್ತು ಅದೇನೆಂದರೆ ಬಿ.ಜೆ.ಪಿ. ಕಾ ಕೆಹನಾ ಸಾಫ್ ಕಿಸಾನ್‌ಕ ಕರ್ಜಾ ಮಾಪ್ ಇದೊಂದೇ ಘೋಷಣೆ ಇತ್ತು. ಅದಕ್ಕೆ ನಾವು ಸಿಕ್ಕಿಬಿದ್ದಿದ್ದೇವೆ. ಇವತ್ತು ನಾವು ಹಳ್ಳಿಗಳಿಗೆ ಹೋದರೆ ರೈತರು ನಮ್ಮನ್ನು ಕಲ್ಲಿನಿಂದ ಒಡಯತಕ್ಕಂಥ ಪರಿಸ್ಥಿತಿ ಬರುತ್ತದೆ ಎಂದು ಮಧ್ಯ ಪ್ರದೇಶದ ಒಬ್ಬ ಮುಖ್ಯಮಂತ್ರಿಗಳು ಹೇಳಿದರು. ಆದ್ದರಿಂದ ಈ ಒಂದು ಹಣವನ್ನು ಅವರು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅವರು ಹೇಳಿದರು, ನಮಗೂ ಸಾಕಾಗಿದೆ, ನಮ್ಮ ಹತ್ತಿರ ಹಣ ಇಲ್ಲ ನಮಗೂ 7 ಕಂತಿನಲ್ಲಿ ಹಣ ಕೊಡಿ ಎಂದು ರಾಜಸ್ಥಾನದವರು ಸಹ ನನ್ನ ಹಾಗೆ ಬಡಿದುಕೊಳ್ಳುತ್ತಿದ್ದಾರೆ. ಹಿಮಾಚಲ ಪ್ರದೇಶದವರು ಸಹ ನನ್ನ ಹಾಗೆ ಬಡಿದುಕೊಳ್ಳುತ್ತಿದ್ದಾರೆ. ಗುಜರಾತ್‌ನವರು ಸಹ ನಮ್ಮ ಹಾಗೆ ಬಡಿದುಕೊಳ್ಳುತ್ತಿದ್ದಾರೆ. ಗುಜರಾತಿನಲ್ಲಿ ನಿಮ್ಮ ಪಕ್ಷದವರು ಮತ್ತು ಜನತಾ ದಳದವರು ಕೂಡಿಕೊಂಡು ಸರ್ಕಾರ ನಡೆಸುತ್ತಿದ್ದಾರೆ ಅವರು ಕೂಡ ಇದನ್ನೇ ಹೇಳುತ್ತಿದ್ದಾರೆ. ಈಗ ಏನೋ ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ ಅದು ನನಗೆ ಗೊತ್ತು. ಕೇಂದ್ರಸರ್ಕಾರದ ಈ ಬೋದನೆ ಏನಿದೆ ಅದು It is not applicable for the loan which has been advanced during the year 1989-90. ಇದನ್ನು ನಾನು ಹೋದ ಸಲ ಸ್ಪಷ್ಟ ಮಾಡಿದ್ದೇನೆ. ಈ ಸಲ ಹೇಳುತ್ತಾ ಇಲ್ಲ. ಮಾನ್ಯ ಯಡಿಯೂರಪ್ಪನವರು ಹೇಳುವುದು ಏನಂದರೆ, ಆ ಸಾಲವನ್ನು ನೀವು ವಸೂಲಿ ಮಾಡಬೇಡಿ ಇದೇ ತಾನೆ ಅವರು ಹೇಳುವುದು. ಆ ಸಾಲವನ್ನು ನೀವು ವಸೂಲಿ ಮಾಡಬೇಡಿ ಎಂದು ಹೇಳಿದರೆ ಹೇಗೆ? ಬಹುಶಃ ಮಾನ್ಯ ಸದಸ್ಯರಾದ ಭೈರೇಗೌಡರಿಗೆ ಯಾರು ಹೇಳಿದರೋ ಗೊತ್ತಿಲ್ಲ. ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಗಳು ಪರಿಶೀಲನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು...

ಶ್ರೀ. ಸಿ. ಭೈರೆಗೌಡ:- ಪರಿಶೀಲನೆ ಮಾಡುತ್ತೇವೆ ಎಂದು ಒಪ್ಪಿಕೊಂಡಿರತಕ್ಕದ್ದು. ಒಪ್ಪಿಕೊಂಡಿದ್ದಾರೆಂದು ನಾನು ಹೇಳಿಲ್ಲ.

ಶ್ರೀ ವೀರೇಂದ್ರಪಾಟೀಲ್:- ಯಾರ ಮುಂದೆ ಹೇಳಿದ್ದಾರೆ?

ಶ್ರೀ ಸಿ. ಭೈರೆಗೌಡ:- ಅವರು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ.

ಶ್ರೀ ವೀರೇಂದ್ರಪಾಟೀಲ್:- ಈ ಸದನದ ಸಮಯವನ್ನು ಸುಮ್ಮನೆ ಹಾಳು ಮಾಡಬೇಡಿ. ಮೊನ್ನೆ ಹಣಕಾಸಿನ ಮಂತ್ರಿಗಳು ಗ್ಲಾಸ್ ಹೌಸ್‌ನಲ್ಲಿ ಒಂದು ದೊಡ್ಡ ಸಮಾರಂಭಕ್ಕೆ ಬಂದ್ದಿದ್ದರು. ಆಗ ನಾನು ಅವರಿಗೆ ಕೇಳಿದೆ ಏನು ದಂಡವತೆಯವರೇ ನೀವು ನಿಮ್ಮ ಕೊರಳಿಗೆ 50 ಪರ್ಸೆಂಟ್ ಹಾಕಿದ್ದೀರಿ, ನೀವು ಹೇಳಿದ್ದಕ್ಕಾಗಿ ನಾವು ಒಪ್ಪಿಕೊಂಡಿದ್ದೇವೆ. ಈ ಹಣವನ್ನು 3 ಕಂತಿನಲ್ಲಿ ಕೊಡಿ ಎಂದು ಹೇಳಿದ್ದೀರಿ. 3 ಕಂತಿನಲ್ಲಿ ಕೊಡುವುದಕ್ಕೆ ಆಗುವುದಿಲ್ಲ, ಎಂದು ಹೇಳಿದೆ. ಆದಕ್ಕೆ ಅವರು ಪಾಟೀಲರೆ ಎಲ್ಲರಿಗೂ ಒಂದೇ ಪ್ರಿನ್ಸಿಪಲ್, ನಾನು ಈಗ ನಿಮ್ಮ ಸಲುವಾಗಿ ಏನಾದರೂ ಒಂದು ಸ್ಪೆಷಲ್ ಕನ್‌ಸಿಷನ್ ತೋರಿಸುವುದಕ್ಕೆ ಸಾಧ್ಯವಿಲ್ಲ, ಅದಕ್ಕಾಗಿ ಎಲ್ಲರಂತೆ ನೀವು ಒಪ್ಪಿಕೊಳ್ಳಿ, ಫ್ಲೀಜ್ ಜಾಯಿನ್ ದಿ ಮೈನ್ ಸ್ಕೀಮ್ ಎಂದು ಹೇಳಿದರು. ಆದರೆ ಒಬ್ಬೊಬ್ಬರೂ ಬಂದು ಇಲ್ಲಿ ಕುಳಿತುಕೊಂಡು ಇಲ್ಲ ಅವರು ಒಪ್ಪಿಕೊಂಡಿದ್ದಾರೆ ಅದಕ್ಕೆ ನೀವು ಒಂದು ನಿಯೋಗ ಮಾಡಿ ಎಂದು ಹೇಳುತ್ತಿದ್ದಾರೆ. ಏತಕ್ಕೆ ನಿಯೋಗ ಮಾಡಬೇಕು? ಸ್ಕೀಂ ಬಂದಿದೆ. ಈ ಸ್ಕೀಮ್‌ನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ನಾವು ಒಪ್ಪಿಕೊಂಡಿದ್ದೇವೆ. ಈ ಸ್ಕೀಮ್ ಪ್ರಕಾರ ಯಾರಿಗೆ ಅನುಕೂಲವಾಗುತ್ತದೆಯೋ ಅವರಿಗೆ ಅನುಕೂಲ ಆಗುತ್ತದೆ. ಯಾರಿಗೆ ಅನುಕೂಲ ಆಗುವುದಿಲ್ಲವೋ ಅವರಿಗೆ ಅನುಕೂಲವಾಗುವುದಿಲ್ಲ. ಆದರೆ ಇವತ್ತು ಮಾನ್ಯ ಯಡಿಯೂರಪ್ಪನವರು ಹೇಳುವುದರಿಂದ ಲೇ ಮಾನ್ಯ ದಂಡವತೆಯವರು ಈ ಸ್ಕೀಮ್‌ನ್ನು ಬೇರೆ ರೀತಿ ತಿರುಗಿಸಿಬಿಡುತ್ತಾರೆ ಅಂದರೆ ನನಗೆ ನಂಬಿಕೆ ಇಲ್ಲ. ಅದು ಆಗುವಂತೆಯೂ ಇಲ್ಲ. ಒಂದು ಮಾತನ್ನು ನೀವು ಹೇಳಬಹುದು.

ಅದೇನೆಂದರೆ, ರೈತ ಸಾಲ ಕೊಡುವಂತೆ ಇಲ್ಲ ಬಹುಶಃ ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಇದನ್ನೇ ಹೇಳುತ್ತಾರೆ. ರೈತ ಸಾಲ ಕೊಡುವಂತೆ ಇಲ್ಲ ಎಂದು. ಈ ಸಾಲ ಎಷ್ಟು ಜನ ರೈತರು ತೆಗೆದುಕೊಂಡಿದ್ದಾರೆ ಈ ಸಾಲ ಎಷ್ಟು ವರ್ಷಗಳಿಂದ ಇದೆ? ಇದನ್ನು ಕೂಡ ನಾವು ಸ್ವಲ್ಪ ವಿಚಾರ ಮಾಡೋಣ. ಮುಂದೆ ನಮಗೆ ದುಡ್ಡು ಬರಬೇಕಲ್ಲ, ಅದು ಎಲ್ಲಿಂದ ಬರಬೇಕು? ಏನು ಮೇಲಿಂದ ದುಡ್ಡು ಉದುರುತ್ತದ್ದೇನು? ನಮಗೆ ದುಡ್ಡು ಎಲ್ಲಿಂದ ಬರುತ್ತದೆ? ಸಾಲ ಎಲ್ಲಿಂದ ರೈತನಿಗೆ ಸಿಗಬೇಕು? ಇವೆಲ್ಲವನ್ನೂ ನಾವು ಚರ್ಚೆ ಮಾಡಿ ಪ್ರತಿಯೊಬ್ಬರು ಇದನ್ನು ಒಪ್ಪಿಕೊಂಡು ಈ ಸ್ಕೀಮ್‌ನ್ನು ಒಪ್ಪಿಕೊಂಡು ಜಾರಿಗೆ ತರಬೇಕು ಎಂದು ಲೆಕ್ಕ ಹಾಕಿ ನಾವು ನಬಾರ್ಡ್‌ಗೆ ಒಂದು ಅಂಡರ್ ಟೇಕಿಂಗ್ ಕೊಟ್ಟಿದ್ದೇವೆ. ಏನೆಂದರೆ ಮಾರ್ಚಿ ತಿಂಗಳವರೆಗೂ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ, ಆದರೆ ನಾವು 40 ಪರ್ಸೆಂಟ್ ರೀಚ್ ಆಗುವುದಕ್ಕೆ ಆಗುವುದಿಲ್ಲ, ಆದಕ್ಕೆ ನಾವು ಪ್ರಯತ್ನ ಮಾಡಿ ಡಿಸೆಂಬರ್‌ವರೆಗೆ ರೀಚ್ ಆಗುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಅಂಡರ್ ಟೇಕಿಂಗ್ಸ್ ಕೊಟ್ಟಿರುವುದರಿಂದ ಮುಂದಿನ ಸಾಲ ನಾವು ನಿಮಗೆ ಕೊಡುತ್ತೇವೆ, ನಾವು ನಿಮ್ಮ ರೈತರಿಗೆ ಸಾಲ ಕೊಡುವುದನ್ನು ನಿಲ್ಲಿಸುವ ಹಾಗಿಲ್ಲವೆಂದು ಹೇಳಿದ್ದಾರೆ. ಆದರೆ ಇವತ್ತು ಸಾಲ ವಸೂಲಿ ಆಗುವ ಹಾಗಿಲ್ಲ ಎನ್ನುವಂಥ ವಾತಾವರಣವನ್ನು ನಾವೇ ಹುಟ್ಟಿಸಿದರೆ ಸ್ವಾಭಾವಿಕವಾಗಿ ತಿಳಿದುಕೊಳ್ಳಿ ರೈತ ಸಾಲ ಕೊಡುವಹಾಗಿಲ್ಲ. ಆಯಿತು ಅವರು ಸಾಲ ಕೊಡುವಹಾಗಿಲ್ಲ ನಾವು ಸಾಲ ವಸೂಲಿ ಮಾಡುವಹಾಗಿಲ್ಲ. ಅಲ್ಲಿಂದ ನಮ್ಮ ಅಪೆಕ್ಸ್ ಬ್ಯಾಂಕ್‌ಗೆ ಕೀಲಿ ಹಾಕೋಣ ನಮ್ಮ ಡಿ.ಸಿ.ಸಿ. ಬ್ಯಾಂಕ್‌ಗಳಿಗೆ ಕೀಲಿ ಹಾಕೋಣ, ನಮ್ಮ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ಕೀಲಿ ಹಾಕೋಣ, ಕೋ ಆಪರೇಟಿವ್ ಬ್ಯಾಂಕಿಗೆ ಕೀಲಿಹಾಕಿ. ರೈತರೇ ನಿಮಗೆ ಬೇಕಾದಲ್ಲಿ ಹೋಗಿ ಸಾಲ ತೆಗೆದುಕೊಂಡು ಬನ್ನಿ ನಮ್ಮ ಮನೆ ಬಾಗಿಲಿಗೆ ಬರಬೇಡಿ ಎಂದು ಹೇಳೋಣ. ಇದನ್ನೇ ತಾನೇ ನೀವು ಇವತ್ತು ಲೆಕ್ಕಾ ಹಾಕುತ್ತಿರುವುದು? ಮತ್ತೇನು, ನಾವು ಅಂಥಾ ವಾತಾವರಣ ನಿರ್ಮಾಣವಾಗುವುದಕ್ಕೆ ಕಾರಣರೇ?

ಶ್ರೀ ಸಿ. ಭೈರೇಗೌಡ:- ಅಂಥಾ ವಾತಾವರಣ ನಿರ್ಮಾಣವಾಗಿದೆಯೆಂದು ನೀವೇ ಹೇಳುತಿದ್ದೀರಿ.

ಶ್ರೀ ವೀರೇಂದ್ರಪಾಟೀಲ್:- ಅಂಥ ವಾತಾವರಣ ನಿರ್ಮಾಣವಾದರೆ ಜನರ ಗತಿ ಏನು ಎಂದು ಇದರ ಬಗ್ಗೆ ತಾವು ವಿಚಾರ ಮಾಡುವುದಿಲ್ಲವೆ? ಜನ ಏನು ವಿಚಾರ ಮಾಡುತ್ತಾರೆ, ಅದನ್ನು ಕೋರ್ಟ್‌ನಲ್ಲಿ ಇಡಬಹುದು. ನಾನು ಹೇಳುತ್ತೇನೆ, ನಿಮ್ಮ ಜವಾಬ್ದಾರಿ ಆದು. ಇವತ್ತು ಬೇಡ ಎಂದು ನಾನು ಹೇಳಿದೆ. ಬಹುಶಃ ಅವರು ಏನು ಹೇಳುತ್ತಾರೆಂದರೆ,.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸಭಾನಾಯಕರೇ, ಪೇಪರ್ ಕಟಿಂಗ್ಸ್ ತೆಗೆದು ನೋಡಿ. ಪ್ರಧಾನ ಮಂತ್ರಿಗಳು ಹೇಳಿರುವುದನ್ನು ಪೇಪರ್ ಕಟಿಂಗ್ಸ್‌ನಲ್ಲಿ ನೋಡಿ.

ಶ್ರೀ ವೀರೇಂದ್ರಪಾಟೀಲ್:- ಏನೆಂದು ಹೇಳಿದ್ದಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಹತ್ತು ಸಾವಿರ ರೂಪಾಯಿಗಳ ಒಳಗಿನ ಎಲ್ಲ ರೈತರ ಸಾಲ ಮನ್ನಾ ಮಾಡುತ್ತೇವೆಂದು ಪ್ರಧಾನ ಮಂತ್ರಿಗಳು ಹಣ ಕಾಸಿನ ಮಂತ್ರಿಗಳು 100 ಸಾರಿ ಹೇಳಿರುವುದನ್ನು ನಾನು ಪೇಪರ್ ಕಟಿಂಗ್ಸ್ ತಂದು ತೋರಿಸುತ್ತೇನೆ.

ಶ್ರೀ ವೀರೇಂದ್ರಪಾಟೀಲ್:- ಮತ್ತೆ ಈ ಸ್ಕೀಮ್ ಏಕೆ ತಂದರೆಂದು ನೀವೇ ಹೇಳಿ. ಮಾನ್ಯ ಯಡಿಯೂರಪ್ಪನವರು ಹೇಳಿದ ಕೂಡಲೇ ಅವರು ಕೇಳುತ್ತಾರೆ. ಯಡಿಯೂರಪ್ಪನವರು ಹೇಳಿದ ಕೂಡಲೇ ಅವರು ಕನ್ವಿನ್ಸ್ ಆಗುಬಿಡುತ್ತಾರೆ. ಇಲ್ಲಿಯವರೆಗೆ ಅವರು ಕನ್ವಿನ್ಸ್ ಏಕೆ ಆಗಲಿಲ್ಲವೆಂದರೆ, ಯಡಿಯೂರಪ್ಪನವರು ಹೋಗಿ ಹೇಳಿಲ್ಲ. ಒಂದು ವೇಳೆ ಅವರು ಹೋಗಿ ಹೇಳಿದ್ರೆ ಅವರು ಕನ್ವಿನ್ಸ್ ಆಗಿಬಿಡುತ್ತಿದ್ದರು. ಹೊಸದಾಗಿ ಸ್ಕೀಮ್ ಬರುತ್ತಿತ್ತು. ಈ ರೀತಿ ಮಾತನಾಡಿದರೆ ಹೇಗೆ? ನಿಮ್ಮನ್ನು ಬೇಕಾದರೆ ಅಲ್ಲಿಗೆ ಕಳುಹಿಸಿಕೊಡುತ್ತೇನೆ. ನಾಳೆ ಟಿಕೇಟ್ ತರಿಸಿಕೊಡುತ್ತೇನೆ, ಮಾತನಾಡಿಕೊಂಡು ಬನ್ನಿ. ಮಾನ್ಯ ಅಧ್ಯಕ್ಷರೇ, This is a scheme meant for the entire country. Sitting here in Vidhana Soudha, we are not competent to modify the entire scheme. ಅಥವಾ ನಾವು ಒಬ್ಬರು ಹೇಳಿದರೆ ಆ ಸ್ಕೀಮ್ ಮಾಡಿಫೈ ಆಗುವ ಹಾಗಿಲ್ಲ. ನಾವು 50 ಪರ್ಸೆಂಟ್

ಕೊಡುವ ಹಾಗಿಲ್ಲ, ನೀವೇ ಎಲ್ಲಾ ಹಣವನ್ನು ಕೊಡಬೇಕೆಂದು 13 ಜನ ಮುಖ್ಯ ಮಂತ್ರಿಗಳು ಹೋಗಿ ರಿಟನ್ ರೆಪ್ರಸೆಂಟೇಷನ್ ಕೊಟ್ಟರೂ ಕೂಡ ಅವರು ಕೇಳಲಿಲ್ಲ. ಅವರು ಹೇಳಿದರು ನಾವು ಏನು ಸ್ಕೀಮ್ ಮಾಡಿದ್ದೆವೆಯೋ ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ನೀವು ಒಪ್ಪಿಕೊಳ್ಳುತ್ತೀರೋ ಇಲ್ಲವೋ ಎಂದು ಒತ್ತಾಯ ಮಾಡಿ ನಮಗೆ 50 ಪರ್‌ಸೆಂಟ್ ಕೊಡುವುದಕ್ಕೆ ಒಪ್ಪಿಸಿದ್ದಾರೆ. ರೈತರ ಹಿತದೃಷ್ಟಿಯಿಂದ ಈ ಜವಾಬ್ದಾರಿಯನ್ನು ನಾವು ಒಪ್ಪಿಕೊಂಡಿದ್ದೇವೆ. ನಮ್ಮ ಹತ್ತಿರ ದುಡ್ಡು ಇಲ್ಲದಿದ್ದರೂ ಈ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದೇವೆ. ನಾವು ಯಾವ ತರಹದ ಭರವಸೆ, ವಚನ ಕೊಡಲಾರದೆ ಇದ್ದರೂ ಈ ಜವಾಬ್ದಾರಿಯನ್ನು ಒಪ್ಪಿಕೊಂಡ ಮೇಲೆ ಮತ್ತೆ ರೈತರ ಸಾಲ ಮನ್ನಾ, ರೈತರ ಸಾಲ ಮನ್ನಾ ವಸೂಲು ಮಾಡಬೇಡಿ, ವಸೂಲು ಮಾಡಬೇಡಿ ಎಂದರೆ ಹೇಗೆ? ಇವತ್ತು ನಾನು ಸಾಲ ವಸೂಲಿ ಮಾಡಬೇಡಿ ಎಂದು ಇಲ್ಲಿ ಅನೌನ್ಸ್ ಮಾಡಿದರೆ, ಕೂಡಲೇ ನಬಾರ್ಡ್‌ನವರು ಈಗ ಕೊಡುತ್ತಿರುವ ಸಾಲವನ್ನು ನಿಲ್ಲಿಸಿಬಿಡುತ್ತಾರೆ. ಹಿಂದೆ ಈ ರೀತಿ ಎರಡು ಸಲ ಆಗಿದೆ. ಅದಕ್ಕಾಗಿ ಕೋ ಆಪರೇಟಿವ್ ಸಿಸ್ಟಮ್‌ನಲ್ಲಿ ಇವತ್ತು ರೈತರಿಗೆ ಸಾಲ ಕೊಡುವಂಥಾ ಅರೇಂಜ್‌ಮೆಂಟ್ ಏನು ಇದೆಯೋ ಅದನ್ನು ಮುಂದುವರಿಸಿಕೊಂಡು ಹೋಗೋಣವೇ ಅಥವಾ ಅದನ್ನು ವೈಂಡ್‌ಪ್ ಮಾಡಿ ರೈತರು ಇನ್ನು ಮುಂದೆ ಯಾವ ಕೋ ಆಪರೇಟಿವ್ ಹತ್ತಿರವೂ ಹೋಗತಕ್ಕದ್ದಲ್ಲ ನಬಾರ್ಡ್ ಹತ್ತಿರ ಹೋಗತಕ್ಕದ್ದಲ್ಲ, ಸಾಹುಕಾರರ ಮನೆ ಬಾಗಿಲಿಗೆ ಹೋಗಿ ಹಣ ಪಡೆದು ವ್ಯವಸಾಯ ಮಾಡಬೇಕೆಂದು ಹೇಳೋಣವೇ? ದುರ್ದೈವದಿಂದ ಪ್ರತಿಸಲ ಈ ಚರ್ಚೆ, ಚರ್ಚೆ ಆಗಿ ಸಾಕಾಗಿ ಹೋಗಿದೆ. ಅದಕ್ಕಾಗಿ ಬೇಸತ್ತು ಈ ಮಾತನ್ನು ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಮುಖ್ಯ ಮಂತ್ರಿಗಳು ಒಂದು ಸವಾಲು ಎಸೆದ ಮೇಲೆ ನಾನು ಏನಾದರು ಹೇಳಬೇಕಲ್ಲಾ? ಮಾನ್ಯ ಮುಖ್ಯ ಮಂತ್ರಿಗಳು ಪದೇ ಪದೇ ಈ ಸದನದಲ್ಲಿ ನಾನು ವಚನ ಕೊಟ್ಟಿಲ್ಲ, ನನ್ನ ಜವಾಬ್ದಾರಿ ಇಲ್ಲ, ಎಂದು ಈ ಸಾಲದ ಮನ್ನಾದ ಬಗ್ಗೆ ಪುನಃ ಪುನಃ ಮಾತನಾಡುತ್ತಾ ಇದೇ ಮಾತನ್ನು ಹೇಳಿದ್ದಾರೆ.

ಶ್ರೀ ವೀರೇಂದ್ರಪಾಟೀಲ್:- ಆದರೂ ಒಪ್ಪಿಕೊಂಡಿದ್ದೇನೆ, ನೀವು ಅಷ್ಟಕ್ಕೇ ನಿಲ್ಲಿಸಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಆಷ್ಟಕ್ಕೇ ನಿಲ್ಲಿಸುವುದಿಲ್ಲ. ಸ್ವಾಮಿ, ನಾನು ಕೇಳುತ್ತೇನೆ, ನಿಮ್ಮದು ಒಂದು ರಾಷ್ಟ್ರೀಯ ಪಕ್ಷ. ರಾಜ್ಯಕ್ಕೆ ಸೀಮಿತವಾದ ಪಕ್ಷವಲ್ಲ. ನಿಮ್ಮ ರಾಷ್ಟ್ರೀಯ ಪಕ್ಷದ ಪ್ರಣಾಳಿಕೆಯಲ್ಲಿ ಇದು ಇತ್ತೋ ಇಲ್ಲವೋ?

ಶ್ರೀ ವೀರೇಂದ್ರಪಾಟೀಲ್:- ಇಲ್ಲ

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಇಲ್ಲಿ ಏನು ಹೇಳಿದ್ದೀರಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ, ಸಾಲ ಮನ್ನಾ ಮಾಡುವ ಬಗ್ಗೆ ಕೇಂದ್ರ ಸರ್ಕಾರವನ್ನು ಶಿಫಾರಸು ಮಾಡುತ್ತೇವೆಂದು ಹೇಳಿದ್ದೀರಿ. ಈಗ ಪ್ರಶ್ನೆ ಏನು? ಈ ಸ್ಕೀಂ ಬದಲಾಯಿಸುವ ಶಕ್ತಿ ಅವರಿಗೆ ಇದೆಯೋ, ಮತ್ತೊಂದು ಇದೆಯೋ ಎಂದು ತಾವು ಕೇಳಿದಿರಿ. ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ನಾನು ಎಲ್ಲ ಕಾಲಕ್ಕೂ ಹೇಳಿಕೊಂಡು ಬಂದಿದ್ದೇನೆ. ತಾವು ಹಿಂದಿನ ಶಾಸನ ಸಭೆಯೊಳಗೆ ಸ್ಕೀಮ್ ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದೀರಿ. ಸ್ಕೀಮ್ ಒಪ್ಪಿಕೊಂಡ ಮೇಲೆ ಬರೀ ಸ್ಕೀಮ್ ಒಪ್ಪಿಕೊಂಡು ವಿಧಾನ ಸೌಧದಲ್ಲಿ ಕುಳಿತುಕೊಂಡರೆ ಸ್ಕೀಮ್ ಇಂಪ್ಲಿಮೆಂಟ್ ಆಗುತ್ತದೆಯೇ? ಅದಕ್ಕೆ ಬೇಕಾಗಿರತಕ್ಕಂಥ ಪೂರಕವಾದ ವ್ಯವಸ್ಥೆ ಏನಾಗಿದೆ? ಮೊದಲನೆಯದು, ಈ ಸ್ಕೀಮ್ ಒಳಗೆ ಬರತಕ್ಕಂಥ ಜನರು ಎಷ್ಟು? ಎಷ್ಟು ಹಣ ಬರುತ್ತದೆ? ಇದನ್ನು ನಾವು ಪದೇ ಪದೇ ಕೇಳುತ್ತಿದ್ದೇವೆ. what is the total amount involved and the number of persons who get the benefit? ಈ ಎರಡು ಮಾಹಿತಿಯನ್ನು ಇದುವರೆಗೆ ಸದನಕ್ಕೆ ಕೊಟ್ಟಿಲ್ಲ. ಇದಾದಮೇಲೆ, ಶ್ರೀಮಾನ್ ಯಡಿಯೂರಪ್ಪನವರು ಹೇಳಿದ ಹಾಗೆ, ಬಹುಶಃ ಮಧ್ಯಪ್ರದೇಶದಲ್ಲಿ 480 ಕೋಟಿ ರೂಪಾಯಿಗಳ ಹೊಸ ಸ್ಕೀಮ್ ಏನು ತಂದಿದ್ದಾರೆ, ಅದನ್ನು ಏನಾದರೂ ನೀವು ಅಭ್ಯಾಸ ಮಾಡಿದ್ದೀರೋ? ಇಲ್ಲಿ ರಾಜಕಾರಣ ಮಾಡುವುದು ಬೇಡ; ಒಂದಂತೂ ನಿಜ. ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ 1989ನೇ ಇಸವಿ ಅಕ್ಟೋಬರ್ 2ನೇ ತಾರಿಖಿನವರೆಗೆ ಇರುವ 10 ಸಹಸ್ರ

ರೂಪಾಯಿಗಳ ಸಾಲವನ್ನು ವಜಾ ಮಾಡುತ್ತೇವೆಂದು ಆದರ ಜವಾಬ್ದಾರಿ ನಾವು ತೆಗೆದುಕೊಳ್ಳುತ್ತೇವೆಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಆದು ನಮಗೆ ಸೀಮಿತವಾದುದು. ಸರಕಾರ ಸಂಸ್ಥೆಗಳ ಸಾಲ ರಾಜ್ಯಕ್ಕೆ ಸಂಬಂಧಪಟ್ಟದ್ದು ಎಂಬ ಕಾರಣಕ್ಕಾಗಿ ಕೇಂದ್ರ ಸರಕಾರದವರೂ ಕೂಡ ನಾವು ಸಂಪೂರ್ಣವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಒಂದು ವೇಳೆ ತೆಗೆದುಕೊಂಡರೂ ನಿಮಗೆ 50 ಪರ್ಸೆಂಟ್ ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರ ಲಾಭವನ್ನು ತೆಗೆದುಕೊಳ್ಳವುದಕ್ಕೆ ತಾವು ಪ್ರಯತ್ನ ಮಾಡಿ ಎಂದು ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ಆದರ ಒಟ್ಟು ಲೆಕ್ಕ ಎಷ್ಟು ಎಂದು ಬಂದರೆ, ಇದರಲ್ಲಿ ನಮ್ಮದು ಬೇರೆ, ಯಡಿಯೂರಪ್ಪನವರದ್ದು ಬೇರೆ ಎಂದು ಇಲ್ಲ. ನಾವು ಏನು ವಾದವನ್ನು ಇಲ್ಲಿ ಇಡುತ್ತಾ ಇದ್ದೇವೆ ಆಂದರೆ, ಕರ್ನಾಟಕದ್ದು ಒಂದು ವಿಭಿನ್ನವಾದಂಥ ವ್ಯವಸ್ಥೆ ಇದೆ. ಕಾರಣ ಏನು ಆಂದರೆ ಹಿಂದಿನ ಸರಕಾರ ಸುಮಾರು 150-160 ಕೋಟಿ ರೂಪಾಯಿಗಳ ಬಡ್ಡಿಯನ್ನು ವಜಾ ಮಾಡಿತು. ಶೇಕಡಾ 7 ರಷ್ಟು ಬಡ್ಡಿಸಾಲ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿತು. ಈ ಎರಡು ಕಾರಣಗಳಿಗಾಗಿ 1989 ರ ಆಕ್ಟೋಬರ್ ತಿಂಗಳ ತಾರೀಖಿನ್ನು ಏನು ನಿಗದಿ ಮಾಡಿದ್ದೀರಿ ಆ ತಾರೀಖಿನೊಳಗಾಗಿ ಕರ್ನಾಟಕದ ರೈತರುಗಳು ಬರುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್:- ನಾನು ಏಕೆ ಇದನ್ನು ಹೇಳುತ್ತಾ ಇದ್ದೇನೆ ಆಂದರೆ, ಅವರು ವಾದ ಮಾಡುವುದರಲ್ಲಿ ತಾವು ವಾದ ಮಾಡುವುದರಲ್ಲಿ ಭೂಮಿ – ಆಕಾಶದಷ್ಟು ವ್ಯತ್ಯಾಸ ಇದೆ. ಇದು ನಿಮ್ಮ ಪಕ್ಷದ ಸ್ಕೀಮ್. ಇದನ್ನು ನೀವು ಮರೆಯಬಾರದು ಆವರ ಪಕ್ಷದ ಸ್ಕೀಮ್ ಆಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೋದಸಲ ಇದನ್ನು ನೀವು ಜಾರಿಗೆ ತರಬೇಕೆಂದು ಹೇಳಿ, ಈಗ ಆದನ್ನು ಟ್ವಿಸ್ಟ್ ಮಾಡುತ್ತಿದ್ದೀರಲ್ಲ ಎಂದು ನನಗೆ ಆಶ್ಚರ್ಯವಾಗುತ್ತಾ ಇದೆ. ಆವರ ಸ್ಕೀಮ್ ಏನೆಂದರೆ, 1989-90ರ ಸಾಲವನ್ನೂ ಕೂಡ ಮನ್ನಾ ಆಗಬೇಕು ಎಂಬುದಾಗಿದೆ. ನೀವು ಕೂಡ ಆದನ್ನೆ ಕೇಳುತ್ತೀರಾ?

ಶ್ರೀ ಬಿ.ಡಿ. ಚಂದ್ರೇಗೌಡ:- ನಾನು 1989ರ ಆಕ್ಟೋಬರ್ 2ನೇ ತಾರೀಖಿನ ಮೇಲೆ ಹೋಗುತ್ತಾ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್:- ಆವರು ಹೇಳುತ್ತಾ ಇರುವುದು ಇಲ್ಲಿಯವರೆಗೆ ಯಾವುದೇ ರೀತಿಯ ಸಾಲ ಇರಲಿ, ಯಾವುದೇ ಶರತ್ತು ಇಲ್ಲದೇ ಮನ್ನಾ ಮಾಡಬೇಕು ಎಂದು ಕೇಂದ್ರ ಸರಕಾರದ ಸ್ಕೀಮ್ ಏನಿದೆ? ಜನತಾ ದಳದ ಸ್ಕೀಮ್ ಪ್ರಕಾರ ನೀರಾವರಿ ಪ್ರದೇಶದಲ್ಲಿರತಕ್ಕಂಥ ಸಾಲ ಮನ್ನಾ ಆಗುವುದಿಲ್ಲ ಮತ್ತು 1989-90ಕ್ಕಿಂತ ಪೂರ್ವದಲ್ಲಿ 3 ವರ್ಷ ಆಣೆವಾರಿ ಆಥವಾ ಯಾವುದು ಒಂದು ಕಡಿಮೆ ಇರುತ್ತದೋ ಆದಕ್ಕೆ ಮಾತ್ರ ಸಾಲ ಮನ್ನಾ ಆಗುತ್ತದೆ. ಅಂಥ ಕೆಲವು ಶರತ್ತುಗಳನ್ನು ಹಾಕಿ ಆವರು ಒಂದು ಸ್ಕೀಮ್ ಕಳುಹಿಸಿ ನಮಗೆ ಕೇಳಿದರು, ಆದನ್ನು ನಾವು ಒಪ್ಪಬೇಕೆ? ನಾವು ಆದನ್ನು ಸದನದ ಮುಂದಿಟ್ಟಿದ್ದೇವೆ. ನಾವೆಲ್ಲರೂ ಸೇರಿ ಚರ್ಚೆ ಮಾಡಿ ಆದನ್ನು ಒಪ್ಪಿಕೊಳ್ಳಬೇಕು. ಈ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. 50ಪರ್‌ಸೆಂಟ್‌ನಷ್ಟು ಕೊಡುವುದಕ್ಕೆ ತಯಾರಾಗಿದ್ದೇನೆ ಎಂದು ಆವೊತ್ತಿನ ದಿವಸ ಈ ಸದನದಲ್ಲಿ ಘೋಷಣೆ ಮಾಡಿದ್ದೇನೆ. ಈಗ ಪ್ರಶ್ನೆ ಏನೆಂದರೆ ಆವರು ಹೇಳುವುದು ಬೇರೆ, ನಾವು ಹೇಳುವುದು ಬೇರೆ. ಫಲಾನುಭವಿಗಳು ಯಾರ್ಯಾರು ಎನ್ನುವುದನ್ನು ಗುರುತಿಸಬೇಕಾಗಿದೆ. ಇದನ್ನೇ ಇವೊತ್ತೂ ಹೇಳಬೇಕಾಗಿದ್ದರೆ, ಫಲಾನುಭವಿಗಳು ಯಾರು ಎನ್ನುವುದನ್ನು ಕಮ್ಮರ್ಷಿಯಲ್ ಬ್ಯಾಂಕ್‌ನವರು ಮತ್ತು ನಾವು ಸೇರಿ ಐಡೆಂಟಿಫೈ ಮಾಡಬೇಕಾಗುತ್ತದೆ. ಏಕೆಂದರೆ, ಕೇಂದ್ರ ಸರಕಾರದವರು ಸ್ಕೀಮನ್ನು ಎರಡು ಸಲ ಬದಲಾವಣೆ ಮಾಡಿದರು. ಮೊದಲು 10 ಸಾವಿರ ರೂಪಾಯಿಗಳ ಒಳಗೆ ಸಾಲ ಇರುವಂಥ ರೈತರಿಗೆ ಮಾತ್ರ ಈ ಸ್ಕೀಮ್ ಅನ್ವಯವಾಗುತ್ತದೆ ಎಂದು ಹೇಳಿದರು. ಆನಂತರ ಸಾಲ ಎಷ್ಟೇ ಇರಲಿ, ರಿಲೀಫ್ ಮಾತ್ರ 10ಸಾವಿರ ರೂಪಾಯಿಗಳವರೆಗೆ ನಾವು ಕೊಡುತ್ತೇವೆ ಎಂದು ಹೇಳಿದರು. ಅನೇಕ ಜನರು ಸಾಲವನ್ನು ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ಮತ್ತು ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತೆಗೆದುಕೊಂಡಿದ್ದಾರೆ. ಆದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಲಿ ಎಷ್ಟು, ಇಲ್ಲಿ ಎಷ್ಟು

ತೆಗೆದುಕೊಂಡಿದ್ದಾರೆ ಎಂದು ಕ್ರಾಸ್ ಚಕ್ಕಿಂಗ್ ಮಾಡಬೇಕಾಗುತ್ತದೆ. ಅಲ್ಲಿ ಎಷ್ಟು ಮಾಫಿ ಆಗುತ್ತದೆ, ಇಲ್ಲಿ ಎಷ್ಟು ಮಾಫಿ ಮಾಡಬೇಕಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಅಲ್ಲಿ ಪೂರ್ತಿ ಮಾಫಿ ಆಗುತ್ತದೆ. ಪೂರ್ತಿ ಮಾಫಿ ಆಗುವುದರಲ್ಲಿ ಅರ್ಧ ಭಾಗವನ್ನು ನಾವು ಕೊಡಬೇಕು, ಅರ್ಧ ಭಾಗವನ್ನು ಕೇಂದ್ರ ಸರಕಾರದವರು ಕೊಡುತ್ತಾರೆ. ಆದನ್ನೆಲ್ಲಾ ನಾವು ಇವೊತ್ತು ಮಾಡುತ್ತಾ ಇದ್ದೇವೆ, ಆ ಎಕ್ಸರ್‌ಸೈಜ್ ನಡೆಯುತ್ತಾ ಇದೆ ಮತ್ತು ಯಾವಾಗ ಇದರ ಪೂರ್ಣ ವಿವರಗಳನ್ನು ಕಲೆಕ್ಟ್ ಮಾಡುತ್ತೇವೆ, ಆಗ ಆದನ್ನು ನಿಮ್ಮ ಮುಂದೆ ಹೇಳುತ್ತೇನೆ. ಇವತ್ತು ಪ್ರಶ್ನೆ ಇರುವುದು ಆದಲ್ಲ, ಯಡಿಯೂರಪ್ಪವರು 'ಏನು ಹೇಳುತ್ತಾರೆ ಅಂದರೆ ರೈತರ ಸಾಲವನ್ನು ಪೂರ್ಣವಾಗಿ ಯಾವ ಶರತ್ತೂ ಇಲ್ಲದೆ ಮನ್ನಾ ಮಾಡಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಏತಕ್ಕಾಗಿ ಇದರ ಬಗ್ಗೆ ವಿಚಾರ ಮಾಡುತ್ತೀರಿ ಎಂದು ಹೇಳಿದೆ. ಏಕೆಂದರೆ ಕೇಂದ್ರ ಸರಕಾರದವರು ಅದಕ್ಕೆ ತಯಾರಾಗಿಲ್ಲ, ರಾಜ್ಯ ಸರಕಾರದ ಪ್ರತಿನಿಧಿಯಾಗಿ ಮುಖ್ಯಮಂತ್ರಿಯಾಗಿ, ಕೇಂದ್ರಸರಕಾರದ ಜೊತೆಗೆ ಮಾತನಾಡಿ, ಅವರ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಯಡಿಯೂರಪ್ಪನವರು ಹೇಳಿದ ಮಾತ್ರಕ್ಕೆ ಅವರು ಸ್ಕೀಮ್‌ನ್ನು ಬದಲಾವಣೆ ಮಾಡುವ ಹಾಗಿಲ್ಲ ಅಥವಾ ಕರ್ನಾಟಕದ ವಿಧಾನಸೌಧದಲ್ಲಿ ರೆಸಲ್ಯೂಷನ್ ಮಾಡುವುದರಿಂದ ಆ ಸ್ಕೀಮ್ ಮಾಡಿ ಆಗುವುದಿಲ್ಲ. ಕರ್ನಾಟಕದವರು ಯಾರಾದರೂ ಡೆಲಿಗೇಶನ್ ಹೋಗುವುದರಿಂದ ಆ ಸ್ಕೀಮ್ ಮಾಡಿಫೈ ಆಗುವುದಿಲ್ಲ. ವಿನಾಕಾರಣವಾಗಿ ಸದನದ ಕಾಲಹರಣ ಮಾಡಬೇಡಿ ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

SRI D.B. CHANDRE GOWDA:- I did not complete. ನಾನು ತಮಗೆ ಏನು ಹೇಳುತ್ತಿದ್ದೆ ಎನ್ನುವುದನ್ನು ಎರಡು ನಿಮಿಷ ಕಾದಿದ್ದರೆ ಪೂರ್ತಿ ಹೇಳುತ್ತಿದ್ದೆ. ಈಗ ನಾನು ಇಲ್ಲಿ ಏನು ಹೇಳುತ್ತಿದ್ದೇನೆ ಅಂದರೆ, ಹಿಂದಿನ ಸರ್ಕಾರದ ಬಡ್ಡಿ ಮನ್ನಾ ಮಾಡುವ ನೀತಿಯಿಂದಾಗಿ, ಹಿಂದಿನ ಸರ್ಕಾರದ ಶೇಕಡ 7 ರಷ್ಟು ಬಡ್ಡಿಯನ್ನು ಕೊಡತಕ್ಕಂಥ ನೀತಿಯಿಂದಾಗಿ ಅನೇಕ ಜನ ರೈತರು ಸಾಲವನ್ನು ಕಟ್ಟಿಬಿಟ್ಟಿದ್ದಾರೆ. ಆದುದರಿಂದ 1989ರ ಆಕ್ಟೋಬರ್ 2ರ ನಿಗದಿತ ತಾರೀಖಿನ ಒಳಗೆ ನೀವು ಹೇಳ ತಕ್ಕಂಥ ಸ್ಕೀಮ್‌ನಲ್ಲಿ ಹೆಚ್ಚು ಜನ ಬರುವುದಿಲ್ಲ. ಉಳಿದಿರತಕ್ಕಂಥವರ ಸಂಖ್ಯೆ ಕಡಿಮೆ. ಈ ಫಿಗರ್ಸ್‌ನಾದರೂ ಕೇಂದ್ರ ಸರ್ಕಾರಕ್ಕೆ ಕೊಡೋಣ ಅಷ್ಟಾದರೂ ನೀವು ಮಾಡದಿದ್ದರೆ ಹೇಗೆ? ಆ ಸ್ಕೀಮ್ 1990-91ಕ್ಕೆ ಅಪ್ಲೈ ಆಗಬೇಕೊ ಬಿಡಬೇಕೊ ಎನ್ನುವುದು ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಆದರ ಮೇಲೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅಥವಾ ಹತ್ತು ಸಾವಿರ ರೂಪಾಯಿಗಳೊಳಗಿನ ಎಲ್ಲಾ ಸಾಲವನ್ನು ಮನ್ನಾ ಮಾಡಬೇಕು ಎನ್ನತಕ್ಕಂಥ ಒಂದು ನಿರ್ಧಾರಕ್ಕೆ ಬಂದಮೇಲೆ ನಾವು ಇಲ್ಲಿ ಇರತಕ್ಕಂಥ ಪರಿಸ್ಥಿತಿಯನ್ನಾದರೂ ಅವರ ಗಮನಕ್ಕೆ ತರಬೇಕು. ಈ ಕಾರಣಕ್ಕಾಗಿ ಕಷ್ಟವೋ ನಿಷ್ಠುರವೋ ಅವರು ಕಟ್ಟಿ ಬಿಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಾವು ಒಂದು ನಿಮಿಷ ಯಿಲ್ಡ್ ಆಗುವುದಾದರೆ ಒಂದು ವಿಚಾರವನ್ನು ಹೇಳುತ್ತೇನೆ. ನಾನು ಅವತ್ತಿನಿಂದ ಬಡಿದುಕೊಂಡದ್ದು ಏನು? ಕೇಂದ್ರ ಸರ್ಕಾರ ಈ ಯೋಜನೆಯನ್ನು ತರುವುದಕ್ಕೆ ಮುಂಚೆ ನಮ್ಮ ರಾಜ್ಯದ ರೈತರ ಪರಿಸ್ಥಿತಿಯ ಅರಿವನ್ನು ಕೇಂದ್ರ ಸರ್ಕಾರಕ್ಕೆ ತಂದು ಈ ಇಂಟರೆಸ್ಟ್ ಸಬ್ಸಿಡಿ ಕಾರಣದಿಂದ ಅನುಕೂಲವಾಗುವುದಿಲ್ಲ, ಅಲ್ಲಿ ಡಿಫಾಲ್ಟರ್ ಎನ್ನುವ ಪದವನ್ನು ಉಪಯೋಗಿಸಬೇಡಿ ಎನ್ನುವ ಒತ್ತಡವನ್ನು ತಂದು ಅನುಕೂಲವನ್ನು ಮಾಡುವಂಥ ಪ್ರಯತ್ನ ರಾಜ್ಯಸರ್ಕಾರದಿಂದ ಆಗಲಿಲ್ಲ. ಅದಕ್ಕಾಗಿ ಈಗಲಾದರೂ ಮಾಡಿದರೆ ನಮ್ಮ ರಾಜ್ಯಸರ್ಕಾರಕ್ಕೆ ಅನುಕೂಲವಾಗುತ್ತದೆ, ಈ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಶ್ರೀ. ಡಿ.ಬಿ. ಚಂದ್ರೇಗೌಡ:- ಈ ಕೆಲಸವನ್ನು ತಾವು ಮಾಡಿ, ಅದಕ್ಕೆ ಒಂದು ವೇದಿಕೆಯಾದರೂ ಬೇಕಲ್ಲ.

(ಗೊಂದಲ)

ಶ್ರೀ ವೀರೇಂದ್ರಪಾಟೀಲ್:- 1989-90ರ ಸಾಲ ಮನ್ನಾ ಮಾಡುವುದಕ್ಕೆ.....

(ಗೊಂದಲ)

ಶ್ರೀ ವೀರೇಂದ್ರಪಾಟೀಲ್:- ಅವರು ಅದನ್ನು ಕೇಳುತ್ತಿದ್ದಾರೆ. ನೀವು ಸ್ಪಷ್ಟವಾಗಿ ಹೇಳಿ, ಒಳಗೊಂದು, ಹೊರಗೊಂದು ಇಟ್ಟುಕೊಂಡು ಹೇಳಬೇಡಿ. ಸ್ಪಷ್ಟವಾಗಿ ನಿಮ್ಮ ನೀತಿ ಏನು? ಇವತ್ತು ನೀವು ಹೇಳತಕ್ಕಂಥ ರೀತಿಯಲ್ಲಿ ನಾವು ಇಂಟರೆಸ್ಟ್ ಸಬ್ಸಿಡಿಯನ್ನು ಕೊಟ್ಟಿದ್ದೇವೆ. ಎಲ್ಲರೂ ಸಾಲ ಕೊಟ್ಟಿದ್ದಾರೆ ಎಂದರೆ ನಾವು ಅದರ ಫಿಗರ್ಸನ್ನು ತೆಗೆಯುತ್ತೇವೆ, ಅದನ್ನು ತೆಗೆಯುವುದಕ್ಕೆ ಟೈಮ್ ಹಿಡಿಯುತ್ತದೆ. ಏಕೆಂದರೆ, ಎಲ್ಲಾ ರೀತಿಯಲ್ಲೂ ಮಾಹಿತಿಯನ್ನು ಕಲೆಕ್ಟ್ ಮಾಡಬೇಕಾಗುತ್ತದೆ. ಆದಷ್ಟು ಮಾಹಿತಿಯನ್ನು ಕೊಡುತ್ತೇವೆ. ಅವರ ಸ್ಕೀಂ ಪ್ರಕಾರ ಎಷ್ಟು ಜನರಿಗೆ ಅನುಕೂಲವಾಗುತ್ತದೆ ಎನ್ನುವಂಥದ್ದನ್ನು ಮಾಡುವುದು ದೊಡ್ಡ ಪ್ರಶ್ನೆಯೇನೂ ಆಲ್ಲ. ಅದನ್ನು ನಾವು ಮಾಡಲು ತಯಾರು ಇದ್ದೇವೆ. ಆದರೆ ನೀವು ಹೇಳುವುದರಲ್ಲಿ ಮತ್ತು ಅವರು ಹೇಳುವುದರಲ್ಲಿ ವ್ಯತ್ಯಾಸ ಏನೆಂದರೆ, ಅದು ಹಿಂದೆ ಮುಂದೆ ಪ್ರಶ್ನೆ ಏನೂ ಇಲ್ಲವೇ ಇಲ್ಲ, ಸಾಲ ಎಷ್ಟಿದೆಯೋ ಅದನ್ನೆಲ್ಲಾ ಮಾಫ್ ಮಾಡಬೇಕು ಎನ್ನುವ ಮಾತನ್ನು ಅವರು ಆಡುತಿದ್ದಾರೆ. ತಾವು ಏನೇನು ಕೇಳುತ್ತಿದ್ದೀರಿ, ಅದನ್ನು ಕಲೆಕ್ಟ್ ಮಾಡಿ ನಿಮಗೆ ಕೊಡುತ್ತೇವೆ, ಬೇಕಾದರೆ ಕೇಂದ್ರ ಸರ್ಕಾರಕ್ಕೂ ಕಳುಹಿಸೋಣ.

ಶ್ರೀ. ಡಿ.ಬಿ ಚಂದ್ರೇಗೌಡ:- ಅವರು ಹೇಳತಕ್ಕಂಥ ಒಂದು ಅಭಿಪ್ರಾಯ ವಾದಕ್ಕೆ ಪೂರಕವಾಗುತ್ತದೆ. ನಾವು ಸ್ಟಾಟಿಸ್ಟಿಕಲ್ ಡ್ಯಾಟಾ ಕೂಡದೆ ನಮ್ಮ ಸ್ಥಿತಿಯನ್ನು ಅವರಿಗೆ ಹೇಳದೆ.....

ಶ್ರೀ ವೀರೇಂದ್ರಪಾಟೀಲ್:- ಎಲ್ಲಾ ಸ್ಟೇಟ್‌ನಲ್ಲೂ ಮಾಡಿಲ್ಲ.

ಶ್ರೀ. ಡಿ.ಬಿ ಚಂದ್ರೇಗೌಡ:- ಎಲ್ಲಾ ಸ್ಟೇಟ್‌ಗಳ ಜೊತೆ ಕರ್ನಾಟಕವನ್ನು ಹೋಲಿಸಬೇಡಿ. ಕರ್ನಾಟಕದಲ್ಲಿ ವಿಶೇಷವಾದ ಸ್ಕೀಮ್‌ಗಳು ಇತ್ತು. ಈ ಕಾರಣಕ್ಕಾಗಿ ಹೀಗಾಗಿದೆ. ಈ ರೀತಿಯಾಗಿ ವಾದವನ್ನು ಮಂಡಿಸತಕ್ಕಂಥ ಪ್ರಯತ್ನವನ್ನಾದರೂ ಮಾಡಬಹುದು.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ನನಗೆ ಈ ರಾಷ್ಟ್ರೀಯ ರಂಗದ ಪ್ರಣಾಳಿಕೆ ಏನು ಎನ್ನುವುದರ ಬಗ್ಗೆ ನಾನು ಮಾತನಾಡುವುದಿಲ್ಲ, ನನಗೂ ಅದಕ್ಕೂ ಸಂಬಂಧ ಇಲ್ಲ. ಹಾಗೆಯೇ ಈ ಸಾಲ ರದ್ದಿಗೆ ಸಂಬಂಧಪಟ್ಟಂತೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಬಗ್ಗೆ ನಾನು ಮಾತನಾಡುತ್ತಿಲ್ಲ. ಮಾನ್ಯ ಸಭಾನಾಯಕರು ಇದು ಗಹನವಾದ ವಿಚಾರ ಆಲ್ಲ ಎಂದು ಪರೋಕ್ಷವಾಗಿ ತಿಳಿಸುತ್ತಿದ್ದರು. ಇನ್ನೂ ಗಹನವಾದ ವಿಚಾರಗಳನ್ನು ಈ ಸದನದಲ್ಲಿ ಚರ್ಚೆ ಮಾಡಬೇಕು ಎಂದು ಹೇಳಿದರು. ಅಂದರೆ ಇದು ಗಹನವಾದ ವಿಚಾರ ಆಲ್ಲ ಎಂದು ಅರ್ಥವಾಯಿತು. ಇದು ಗಹನವಾದ ವಿಚಾರ ಹೌದೋ ಆಲ್ಲವೋ ಎನ್ನುವುದು ನಿಮಗೆ ಸ್ವಲ್ಪ ಕಾಲದಲ್ಲಿಯೇ ಗೊತ್ತಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್:- ಇದನ್ನು ಎಷ್ಟು ಸಲ ಚರ್ಚೆ ಮಾಡುವುದು?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಎಷ್ಟು ಸಲ ಚರ್ಚೆ ಮಾಡುವುದು ಎಂದರೆ ಈ ಸಮಸ್ಯೆ ಇರುವವರೆಗೆ ಚರ್ಚೆ ಮಾಡಬೇಕಾಗುತ್ತದೆ. ಸಮಸ್ಯೆ ಎಲ್ಲಿಯವರೆಗೆ ಇರುತ್ತದೆ, ಅಲ್ಲಿಯವರೆಗೆ ಚರ್ಚೆ ಮಾಡಲೇಬೇಕಾಗುತ್ತದೆ. ಈ ಸರ್ಕಾರ ರೈತರ ಜೊತೆಗೆ ಹುಡುಗಾಟಿಕೆಯನ್ನು ಮಾಡುತ್ತಿದೆ. ಈ ರಾಷ್ಟ್ರೀಯ ರಂಗದ ಪ್ರಣಾಳಿಕೆಯನ್ನು ಕುತಂತ್ರದ ಪ್ರಣಾಳಿಕೆ ಎಂದು ಇವತ್ತು ನಾನು ಹೇಳುವವನು. ಆ ಯೋಜನೆ ಕುತಂತ್ರದ ಯೋಜನೆ ಎಂದು ಹೇಳುವವನು. ನೀವು ಏತಕ್ಕೆ ಒಪ್ಪಿದಿರಿ ಎಂದರೆ ಕುತಂತ್ರದ ಯೋಜನೆಯಾದ್ದರಿಂದ ಒಪ್ಪಿದಿರಿ, ಇದನ್ನು ಜಾರಿಗೆ ತುರುವುದಕ್ಕಾಗುವುದಿಲ್ಲ, ಯಾರದೂ ಸಾಲ ರದ್ದಾಗುವುದಿಲ್ಲ. ಇದನ್ನು ನಾನು ಹೇಳುತ್ತಲೇ ಇದ್ದೇನೆ. But I am discussing this issue as a national issue totally independent of these two manifestoes. ಈ ಮ್ಯಾನಿಫೆಸ್ಟೋ ನನಗೆ ಬೇಕಾಗಿಲ್ಲ. ನಿಮ್ಮ ಮ್ಯಾನಿಫೆಸ್ಟೋಗಳಲ್ಲಿ ಹೇಳಿರುವುದರಲ್ಲಿ ನೀವು ಎಷ್ಟು ವಚನವನ್ನು ಪಾಲಿಸುತ್ತೀರಿ ಎಷ್ಟು ವಚನಭ್ರಷ್ಟರು ಎನ್ನುವುದನ್ನು 40 ವರ್ಷಗಳಿಂದ ನೋಡಿ ನಮಗೆ ಸಾಕಾಗಿದೆ. That is not the point that is involved here. ನಿಮ್ಮ ಸರ್ಕಾರದ ಯಾವ ಯಾವ ನೀತಿಯಿಂದ ರೈತನಿಗೆ ಮೋಸ ಮಾಡಿದ್ದೀರಿ ಎನ್ನುವುದನ್ನು ನಾವು ತೋರಿಸಿಕೊಟ್ಟಿದ್ದೇವೆ, ಆ

ಆಧಾರದ ಮೇಲೆ ಈ ಸದನದಲ್ಲಿ ಈ ವಿಚಾರವನ್ನು ಮತಕ್ಕೆ ಹಾಕಿ ಎಂದು ನಾನು ಹೇಳಿದೆ. ಈ ಸರ್ಕಾರಗಳು ರೈತನಿಗೆ ಮೋಸ ಮಾಡಿವೆ, ಆದುದರಿಂದ ಅವನ ಸಾಲ ರದ್ದಾಗಬೇಕಾಗುತ್ತದೆ. ಸರ್ಕಾರಗಳು ರೈತನ ಋಣದಲ್ಲಿವೆ, ಆದಕ್ಕಾಗಿ ನಿಮಗೆ ಧೈರ್ಯ ಇದ್ದರೆ ಆ ವಿಷಯವನ್ನು ಮತಕ್ಕೆ ಹಾಕಿ ಮತ್ತೆ ಏನೂ ಚರ್ಚೆ ಬೇಡ, ನಾನು ಈ ಸದನದಲ್ಲಿ ಆ ವಿಷಯವನ್ನು ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು:- ಚರ್ಚೆ ಬೇಡ ಅಂದರೆ ಸರಿ ಬಿಡಿ, ಈಗ ನಿಲುವಳಿ ಸೂಚನೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಸದನದ ಕಲಾಪಗಳಿಗೆ ಅಡ್ಡಿ ಮಾಡಲು ನಾನು ಇಷ್ಟಪಡುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರೊಫೆಸರ್ ನಂಜುಂಡಸ್ವಾಮಿ ಅವರು ನಮ್ಮ ರಾಷ್ಟ್ರೀಯ ರಂಗದ್ದು ಕುತಂತ್ರ ಪ್ರಣಾಳಿಕೆ ಒಪ್ಪಿಕೊಂಡಿದ್ದು ಕುತಂತ್ರ ಎಂದು ಹೇಳಿದ್ದಾರೆ ಅದು ಅವರ ವೈಯಕ್ತಿಕ ಅಭಿಪ್ರಾಯ, ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಆ ಅಭಿಪ್ರಾಯಕ್ಕೆ ನನ್ನ ಮತ ಇಲ್ಲ. ನಮ್ಮದು ಕುತಂತ್ರ ಇರಲಿಲ್ಲ. ಬಹುಶಃ ಆ ಕಾರಣಕ್ಕಾಗಿ ರಾಷ್ಟ್ರೀಯ ರಂಗದ ಸರ್ಕಾರಕ್ಕೆ ಸಹ ಇಡೀ ದೇಶದ ಜನ ಮತ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸದನದ ಸಮಯವನ್ನು ಹಾಳು ಮಾಡಲು ನಾನು ಇಷ್ಟಪಡುವುದಿಲ್ಲ. ಈಗಲಾದರೂ ಸದನದ ಸಮಿತಿಯನ್ನು ಮಾಡಿ. ರೈತರ ಸಾಲ ವಸೂಲಾತಿಗೆ ತಡೆ ಆಜ್ಞೆ ಕೊಡಿ.....

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಸದನದ ಸಮಿತಿ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೊಸ ಯೋಜನೆಯನ್ನು ತೆಗೆದುಕೊಂಡು 10 ಸಾವಿರದೊಳಗೆ ಇರುವ ರೈತರ ಸಾಲ ಮನ್ನಾ ಮಾಡುವಂತಹ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ ಇಲ್ಲದಿದ್ದರೆ ಈ ಸರ್ಕಾರಕ್ಕೆ ರೈತರ ಸಮಸ್ಯೆ ಬಗ್ಗೆ ಕಳಕಳಿ ಇಲ್ಲ ಎಂದು ಹೇಳಿ, ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತೇನೆ. ರೈತರ ಸಮಸ್ಯೆಯನ್ನು ನಿವಾರಣೆ ಮಾಡಲು ಸಾಧ್ಯ ಇಲ್ಲ ಎಂದರೆ ಈ ಸರ್ಕಾರ ಶಾಪಕ್ಕೆ ಗುರಿ ಆಗುತ್ತದೆ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಸದನದಿಂದ ಹೊರಗಡೆ ಹೋಗುತ್ತೇನೆ

(ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ತಮ್ಮ ಪಕ್ಷದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಬಿಜೆಪಿ ಸದಸ್ಯರಿಗೆ ಮಾತ್ರ ರೈತರ ಬಗ್ಗೆ ಕಾಳಜಿ ಇರುವುದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಒಂದು ನಿಯೋಗವನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗಬಹುದಿತ್ತು. ಇದು ಬಹಳ ಸಣ್ಣ ವಿಷಯ ಅಂತಹ ದೊಡ್ಡದು ಏನಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇವ್ರೊತ್ತು ಮಾನ್ಯ ಮುಖ್ಯಮಂತ್ರಿಗಳ ಮಾತಿನ ಸರಣಿ, ವಾದದ ಸರಣಿ ನೋಡಿದರೆ ಅವರು ಬಹಳ ಸಿಟ್ಟಿನಿಂದ ಇದ್ದಹಾಗೆ ಕಾಣುತ್ತದೆ...

ಅಧ್ಯಕ್ಷರು:- ಸಿಟ್ಟೂ ಇಲ್ಲ ಎಂಥಾದ್ದು ಇಲ್ಲ. ಇವತ್ತು ನೀವು ಸಿಟ್ಟು ಮಾಡಿಕೊಂಡ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಾವು ದಿನಾ ನೋಡುತ್ತಿದ್ದೇವೆ. ಇದು ಸರಿಯಾದ ನೀತಿ ಅಲ್ಲ ಎಂದು ನಾನೂ ಸಹ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್:- ಮಾನ್ಯ ಅಧ್ಯಕ್ಷರೇ, ರೈತರಿಗೆ ಹೆಚ್ಚು ಅನುಕೂಲ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಮೆಟ್ರೋ ಬಗ್ಗೆ 15 ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ.

ಅಧ್ಯಕ್ಷರು:- ಅದು ಲಾಂಗ್ ಟರ್ಮ್ ಪಾಲಿಸಿ..

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಈ ಬಗ್ಗೆ ರೈತರು ಯಾರೂ ಚಳುವಳಿ ಮಾಡಿಲ್ಲ. ರೈತರಿಗೆ ಸುಮಾರು 40-50 ಕೋಟಿ ರೂಪಾಯಿ ಹೆಚ್ಚು ಬರಬೇಕು. ಮಾನ್ಯ ಸದಸ್ಯರು ಹೇಳಿದ ಹಾಗೆ ಇಷ್ಟು ಕಾಳಜಿ ಇಲ್ಲ ಎಂದ ಮೇಲೆ ನಾವು ಏಕೆ ಸದನದಲ್ಲಿ ಕುಳಿತುಕೊಳ್ಳಬೇಕು. ನಾನು ಸಹ ಸದನದಿಂದ ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಬಾಬಾಗೌಡ ರುದ್ರಗೌಡ ಪಾಟೀಲರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಸಿ.ಬೈರೇಗೌಡ:- ರೈತರ ಸಾಲ ಮನ್ನಾ ಮಾಡಬೇಕು.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಈಗ ನಾನು ತಮ್ಮ ಮುಂದೆ ಸ್ವಲ್ಪ ಹೊತ್ತಿನ ಕೆಳಗೆ ಹೇಳಿದೆ

ಅಧ್ಯಕ್ಷರು:- ನೀವು ಸದನದ ಸಮಿತಿ ಬೇಡ ಎಂದು ಹೇಳಿದಿರಲ್ಲ..

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಒಂದೇ ಒಂದು ವಿಷಯ ಹೇಳಿ ನಾನು ಆಚೆ ಹೋಗುವವನು.

ಅಧ್ಯಕ್ಷರು:- ನೀವೂ ಹೊರಕ್ಕೆ ಹೋಗುತ್ತೀರಾ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಒಂದೇ ಒಂದು ವಿಷಯ ಹೇಳಿ ಸಭೆಯಿಂದ ಹೊರಗೆ ಹೋಗುತ್ತೇನೆ. ಧೈರ್ಯ ಇದ್ದರೆ ಮಾನ್ಯ ಸಭಾ ನಾಯಕರು ಈ ವಿಷಯವನ್ನು ಮತಕ್ಕೆ ಹಾಕಲಿ.

(ಮಾನ್ಯ ಸದಸ್ಯರಾದ ಪ್ರೊ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಮುಖ್ಯಮಂತ್ರಿಗಳು ಹೇಳಿದರು..

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಇವ್ರೊತ್ತು ಕೇಂದ್ರ ಸರ್ಕಾರದ ಒಂದು ಪ್ರಣಾಳಿಕೆ ಬಗ್ಗೆ ಟೀಕೆ ಮಾಡುತ್ತಿದ್ದರು.

ಅಧ್ಯಕ್ಷರು:- ಅವರು ಕೇಂದ್ರದ ಪ್ರಣಾಳಿಕೆಯನ್ನು ಟೀಕೆ ಮಾಡಲಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅವರು ವಚನದಂತೆ ನಡೆದುಕೊಳ್ಳಲಿಲ್ಲ, ಮಾಡಲಿಲ್ಲ ಎಂದು ಹೇಳಿದರು..

ಅಧ್ಯಕ್ಷರು:- ಅವರು ವಚನದಂತೆ ನಡೆದುಕೊಳ್ಳಲಿಲ್ಲ ಎಂದೂ ಹೇಳಲಿಲ್ಲ. ಅವರು ಹೇಳದೇ ಇರುವ ವಿಷಯವನ್ನು ನೀವು ಹೇಳುತ್ತಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ರಾಜ್ಯದ ಕಾಂಗ್ರೆಸ್ ಸರ್ಕಾರದವರು ರೈತರ ಸಾಲ ಮನ್ನಾ ಮಾಡಲಿಕ್ಕೆ ಕೇಂದ್ರಕ್ಕೆ ಒತ್ತಾಯ ಮಾಡುತ್ತೇವೆ ಎಂದು....

ಅಧ್ಯಕ್ಷರು:- ಅವರು ಅದನ್ನು ಮಾಡಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಮುಖ್ಯ ಮಂತ್ರಿಗಳು ಇವ್ರೊತ್ತಿನವರೆಗೂ ರೈತರ ಸಾಲ ಮನ್ನಾ ಮಾಡಬೇಕು ಎಂದು ಕೇಳಲಿಲ್ಲ.....

ಅಧ್ಯಕ್ಷರು:- ಒತ್ತಾಯ ಮಾಡಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಕೇಂದ್ರದ ಯೋಜನೆಯನ್ನು ಜಾರಿಗೆ ತರಲು ಒತ್ತಾಯ ಮಾಡಬೇಕು. ರೈತರ ಸಾಲ ಮನ್ನಾ ಮಾಡಲಿಕ್ಕೆ ಇವತ್ತಾದರೂ ಒಪ್ಪಿಕೊಳ್ಳಿ

(ಗೊಂದಲ)

ಶ್ರೀ ಸಿ. ಬೈರೇಗೌಡ:- ನಾನು ಮಾತನಾಡುವಾಗ ಹೇಳಿದೆ...

ಅಧ್ಯಕ್ಷರು:- ಕಾಗೋಡು ತಿಮ್ಮಪ್ಪನವರೇ ತಮಗೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ:- ನಾನು ಆಗಲೆ ಸರ್ಕಾರ ಇದರಲ್ಲಿ ಮೊಂಡುತನವನ್ನು ಬಿಡಬೇಕು ಎಂಬ ಮಾತನ್ನು ಹೇಳಿದ್ದೇನೆ. ಈಗ ಸರ್ಕಾರದ ಈ ಮೊಂಡುತನವನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಭೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಹಕ್ಕುಭಾದ್ಯತಾ ನಿರ್ಣಯ ಇದೆ. ಇದರ ಬಗ್ಗೆ ಸೂಚನೆ ಕಳಿಸಿದ್ದೇನೆ..

ಅಧ್ಯಕ್ಷರು:- ತಿಮ್ಮಪ್ಪನವರೆ, ನೀವು ವಾಟಾಳ್ ನಾಗರಾಜ್‌ರವರಿಗೆ ಯೀಲ್ಡ್ ಆಗುತ್ತೀರಾ.

ಒಬ್ಬ ಮಾನ್ಯ ಸದಸ್ಯರು:- ಈಗ ಹೊರಗಡೆ ಹೋಗಿದ್ದರು ಮತ್ತೆ ಬಂದಿದ್ದಾರೆ.

(ಗೊಂದಲ)

ಹಕ್ಕು ಬಾಧ್ಯತಾ ಸೂಚನೆ

ರಾಜ್ಯದಲ್ಲಿ ಕನ್ನಡವನ್ನು ಜಾರಿಗೆ ತರುವ ಬಗ್ಗೆ ಚರ್ಚೆ ನಡೆದಾಗ ಮಾನ್ಯ ಸದಸ್ಯರಾದ ಶ್ರೀ ವಜೀರ್ ಅಹಮದ್‌ರವರು ನಿಂದಿಸಿ ಮಾತನಾಡಿದ ಬಗ್ಗೆ

11.05 ಎ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಇಲಾಖೆಗಳ ಬೇಡಿಕೆಗಳ ಬಗ್ಗೆ ಉತ್ತರವನ್ನು ನೀಡುತ್ತಿರುವಾಗ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅವಕಾಶ ಕೊಡುವ ನೀತಿ ಬಗ್ಗೆ ಅವರು ವಿಚಾರಸರಣಿಯನ್ನು ಸದನದಲ್ಲಿ ಮಂಡಿಸುತ್ತಾ ಇದ್ದರು. ಆ ಸಂದರ್ಭದಲ್ಲಿ ನಾವು ಸರ್ಕಾರದ ನೀತಿ ಕನ್ನಡದ ಮಾಧ್ಯಮದ ಪರವಾಗಿರಬೇಕೇ ಹೊರತು, ಇಂಗ್ಲೀಷ್ ಮಾಧ್ಯಮದ ಪರವಾಗಿ ಇರಬಾರದು ಎನ್ನತಕ್ಕಂಥ ವಾದವನ್ನು ಮಂಡಿಸುವುದಕ್ಕೆ ಈ ಸದನದಲ್ಲಿ ಎದ್ದು ತಮ್ಮ ಗಮನ ಸೆಳೆದು ಮಾತನ್ನು ಪ್ರಾರಂಭಮಾಡಿದಾಗ ಗೊಂದಲ ವಾತಾವರಣ ನಿರ್ಮಾಣವಾಗಿ ಈ ಸಭೆಯ ಬಿನ್ನಿಪೇಟೆ ಕ್ಷೇತ್ರದ ಶಾಸಕರಾದ ನಜೀರ್ ಅಹಮದ್‌ರವರು ಕನ್ನಡದ ಹೋರಾಟ ಹೊಟ್ಟೆಪಾಡಿಗಾಗಿ ಎನ್ನತಕ್ಕಂಥ ಮಾತನ್ನು.....

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಹಕ್ಕು ಬಾಧ್ಯತಾ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯ ಸದಸ್ಯನಾಗಿ ಕೆಲಸ ಮಾಡತಕ್ಕಂಥ ನನ್ನ ಪ್ರತಿಷ್ಠೆಗೆ ಬಹಳ ಕಳಂಕ ತರತಕ್ಕಂಥ ಮಾತನ್ನು ಅವರು ಆಡಿದ್ದಾರೆ. ಇದು ನನ್ನ ಹಕ್ಕಿಗೆ ಚ್ಯುತಿಯಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸುವುದಕ್ಕೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು:- ನೀವು ಕಳಿಸಿರತಕ್ಕ ಸೂಚನೆ ನನಗೆ ಈಗ ತಲುಪಿದೆ. ಅದರ ಬಗ್ಗೆ ನಾನು ನನ್ನ ರೂಲಿಂಗನ್ನು ಈ ದಿವಸ ಕೊಡುತ್ತೇನೆ.